# ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002

## ಪ್ರಕರಣಗಳ ಕ್ರಮ ಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ರಾಜ್ಯ  ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ
4. ಸಮಿತಿಯ ಪ್ರಕಾರ್ಯಗಳು
5. ಸಮಿತಿಯ ಅಧಿಕಾರಗಳು
6. ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ
7. ಸಮಿತಿಯ ಪ್ರಕಾರ್ಯಗಳು
8. ಸಮಿತಿಯ ಅಧಿಕಾರಗಳು
9. ಜಿಲ್ಲಾಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ
10. ಸಮಿತಿಯ ಪ್ರಕಾರ್ಯಗಳು
11. ಸಮಿತಿಯ ಅಧಿಕಾರಗಳು

11ಎ. ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿ.

12. ನೋಡಲ್ ಏಜನ್ಸಿಗಳ ನೇಮಕ
13. ನೋಡಲ್ ಏಜೆನ್ಸಿಗಳ ಪ್ರಕಾರ್ಯಗಳು
14. ಸಂಯೋಜಿತ ಅರ್ಜಿ ನಮೂನೆಗಳು
15. ಪ್ರಮಾಣೀಕರಣ
16. [XXX]
17. ಪರಿಭಾವಿತ ಅನುಮೋದನೆ
18. ಅಪೀಲು

18ಎ. ಪುನರವಲೋಕನೆ

19. ದಂಡ
20. ಕಂಪೆನಿಗಳಿಂದ ಅಪರಾಧಗಳು ಇತ್ಯಾದಿ
21. ನಿಯಮಗಳ ರಚನಾಧಿಕಾರ
22. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ
23. ತೊಂದರೆಗಳನ್ನು ನಿವಾರಿಸಲು ಅಧಿಕಾರ


* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2003ರ ಅಧಿನಿಯಮ ಸಂಖ್ಯೆ 45.**–ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಮತ್ತು ಕಾರ್ಯವಿಧಾನ ಅಗತ್ಯತೆಗಳನ್ನು ಕಡಿಮೆ ಮಾಡುವ ಮತ್ತು ದಸ್ತಾವೇಜುಗಳನ್ನು ಸರಳಗೊಳಿಸುವ ಮೂಲಕ ನಿಯಂತ್ರಕ ವ್ಯವಸ್ಥೆಯನ್ನು ಸುಲಭಗೊಳಿಸಲು ಹೊಸ ಹೂಡಿಕೆಗಳ ಸೌಲಭ್ಯಕ್ಕಾಗಿ ಉಪಬಂಧ ಕಲ್ಪಿಸಲು ಮತ್ತು ಹೂಡಿಕೆಗಾರನಿಗೆ ಸ್ನೇಹಪರ ಪರಿಸರವನ್ನು ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ. ಈ ವಿಧೇಯಕವು ಇತರ ವಿಷಯಗಳೊಂದಿಗೆ ಈ ಮುಂದಿನವುಗಳ ಬಗ್ಗೆ ಉಪಬಂಧ ಕಲ್ಪಿಸುತ್ತದೆ, ಎಂದರೆ:–

1. ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸುವ ಕೈಗಾರಿಕಾ ಸಂಸ್ಥೆಗಳಿಂದ ಸ್ವೀಕರಿಸಲಾದ ಅರ್ಜಿಗಳನ್ನು ಪರಿಗಣಿಸುವುದಕ್ಕಾಗಿ, ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ, ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಮತ್ತು ಜಿಲ್ಲಾಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ, ಇವುಗಳ ರಚನೆ ಮಾಡುವುದು.
2. ರಾಜ್ಯದಲ್ಲಿ ಹೂಡಿಕೆ ಉತ್ತೇಜನ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಉದ್ಯಮದಾರರಿಗೆ ಕೈಗಾರಿಕೆ ಉದ್ಯಮಗಳನ್ನು ಸ್ಥಾಪಿಸಲು ಅವಶ್ಯಕ ಮಾರ್ಗದರ್ಶನ ಹಾಗೂ ನೆರವು ನೀಡಲು, ರಾಜ್ಯ ಮಟ್ಟದಲ್ಲಿ ನೋಡಲ್ ಏಜನ್ಸಿಯಾಗಿ ಕರ್ನಾಟಕ ಉದ್ಯೋಗ ಮಿತ್ರ ಎಂಬುದನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಕೈಗಾರಿಕಾ ಕೇಂದ್ರವನ್ನು ಜಿಲ್ಲಾ ನೋಡಲ್ ಏಜನ್ಸಿಯಾಗಿ ನೇಮಕ ಮಾಡುವುದು.
3. ವಿವಿಧ ಕಾನೂನುಗಳ ಅಡಿಯಲ್ಲಿ ನಿಯಮಿಸಲಾದ ಈಗ ಇರುವ ನಮೂನೆಗಳ ಬದಲು ಸಂಯೋಜಿತ ಅರ್ಜಿ ನಮೂನೆಯನ್ನು ಒದಗಿಸುವುದು.
4. ಸಂಯೋಜಿತ ಅರ್ಜಿ ನಮೂನೆಯನ್ನು ನೋಡಲ್ ಏಜನ್ಸಿಗೆ ಸಲ್ಲಿಸುವ ಕಾಲದಲ್ಲಿ ಸ್ವಯಂ ಪ್ರಮಾಣೀಕರಣ ವ್ಯವಸ್ಥೆಯನ್ನು ಮಾಡುವ ಮೂಲಕ ಉದ್ಯಮದಾರರ ಸಂಸ್ಥೆಗಳಿಗೆ ಸೌಲಭ್ಯ ಒದಗಿಸುವುದು.
5. ವಿವಿಧ ಪ್ರಾಧಿಕಾರಗಳ ಮೂಲಕ ನಡೆಸುವ ತಪಾಸಣೆಗಳನ್ನು ಸರಳಗೊಳಿಸುವುದು.
6. ವಿಳಂಬದ ಸಂದರ್ಭದಲ್ಲಿ ಇಲಾಖೆಗಳು ಅಥವಾ ಪ್ರಾಧಿಕಾರಗಳು ಪರಿಭಾವಿತ ಅನುಮೋದನೆ ನೀಡಲು ಅವಕಾಶ ಕಲ್ಪಿಸುವುದು.
7. ಸ್ವಯಂ ಪ್ರಮಾಣೀಕರಣದ ಬಗ್ಗೆ ಮುಚ್ಚಳಿಕೆ ಬರೆದುಕೊಡುವ ಷರತ್ತನ್ನು ಪಾಲಿಸಲು ವಿಫಲರಾದ ಉದ್ಯಮದಾರರ ಸಂಸ್ಥೆಗಳಿಗೆ ದಂಡನೆ ವಿಧಿಸುವುದು.

ಆದ್ದರಿಂದ ಈ ವಿಧೇಯಕ.

(2002ರ ವಿಧಾನಸಭೆಯ ವಿಧೇಯಕ ಸಂಖ್ಯೆ 05)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 24 ಮತ್ತು 3ನೇ ಪಟ್ಟಿಯ 23, 24, 36 ಮತ್ತು 37ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

I

**2014ರ ತಿದ್ದುಪಡಿ ಅಧಿನಿಯಮ ಸಂಖ್ಯೆ 03.**– ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ಕ್ಕೆ (2003ರ ಕರ್ನಾಟಕ ಅಧಿನಿಯಮ 45) ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,–

(ಎ) ಅನುಮೋದಿತ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಯನ್ನು ರಚಿಸುವುದು;

(ಬಿ) ಯೋಜನೆಗಳ/ಪ್ರಸ್ತಾವಗಳ ಹೂಡಿಕೆ ವೆಚ್ಚದ ಹೆಚ್ಚಳವನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ, ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಮತ್ತು ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಇವುಗಳು ಒಪ್ಪಿಗೆ ನೀಡಬಹುದಾದ ಪ್ರಾಜೆಕ್ಟ್ ವೆಚ್ಚವನ್ನು ಹೆಚ್ಚಿಸುವುದು;

(ಸಿ) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ ನಿರ್ಣಯದ ವಿರುದ್ಧ ಪರಿಶೀಲನೆಗೆ ಅವಕಾಶ ಕಲ್ಪಿಸುವುದು ಮತ್ತು

(ಡಿ) ಕೆಲವು ಇತರ ಅನುಷಂಗಿಕ ತಿದ್ದುಪಡಿಗಳನ್ನು ಮಾಡುವುದು.

ಆದ್ದರಿಂದ ಈ ವಿಧೇಯಕ,

(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ:17, ಕಡತ ಸಂಖ್ಯೆ:ಸಂವ್ಯಶಾಇ 05 ಶಾಸನ 2013)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 24 ಮತ್ತು 3ನೇ ಪಟ್ಟಿಯ 23, 24, 36 ಮತ್ತು 37ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

II

**2015ರ ತಿದ್ದುಪಡಿ ಅಧಿನಿಯಮ ಸಂಖ್ಯೆ 43.–** ಐದು ನೂರು ಕೋಟಿ ರೂಪಾಯಿಗಳವರೆಗಿನ ಕೈಗಾರಿಕೆ ಮತ್ತು ಇತರ ಪ್ರಾಜೆಕ್ಟ್‌ಗಳಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಗೆ ಮತ್ತು ಐದು ನೂರು ಕೋಟಿ ರೂಪಾಯಿಗಳನ್ನು ಮೀರಿದ ಕೈಗಾರಿಕೆ ಮತ್ತು ಇತರ ಪ್ರಾಜೆಕ್ಟ್‌ಗಳಿಗೆ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಗೆ ಅಧಿಕಾರವನ್ನು ನೀಡುವುದಕ್ಕಾಗಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು (2003ರ ಕರ್ನಾಟಕ ಅಧಿನಿಯಮ 45) ತಿದ್ದುಪಡಿ ಮಾಡುವ್ವದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ 42:, ಕಡತ ಸಂಖ್ಯೆ:ಸಂವ್ಯಶಾಇ 50 ಶಾಸನ 2015)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 24 ಮತ್ತು 3ನೇ ಪಟ್ಟಿಯ 23, 24, 36 ಮತ್ತು 37ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

III

**2020ರ ಅಧಿನಿಯಮ ಸಂಖ್ಯೆ 29.-** ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ದಿಮೆಯನ್ನು ಸ್ಥಾಪಿಸಲು ಸಂಯೋಜಿತ ಅರ್ಜಿ ನಮೂನೆಯನ್ನು ದಾಖಲಿಸಲು ಮತ್ತು ವಾಣಿಜ್ಯ ಕಾರ್ಯಾಚರಣೆಯನ್ನು ಸಿದ್ಧಗೊಳಿಸಲು ತಾತ್ಕಾಲಿಕ ಒಪ್ಪಿಗೆ ನೀಡಿಕೆಗಾಗಿ (clearance) ಉಪಬಂಧ ಕಲ್ಪಿಸಲು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು (2003ರ ಕರ್ನಾಟಕ ಅಧಿನಿಯಮ 45) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಮುಂದುವರೆದು, ದೇಶದಾದ್ಯಂತ ಹಲವು ರಾಜ್ಯಗಳಲ್ಲಿ ಸಮಾನವಾದ ಅಧಿನಿಯಮಗಳನ್ನು ಪರಿಚಯಿಸಲಾಗಿದ್ದು, ಅವು ಸಂಬಂಧಿತ ರಾಜ್ಯಗಳಲ್ಲಿ ಅನುಕೂಲಕರ ವಾತಾವರಣವನ್ನು ಒದಗಿಸಲು ಸಹಾಯ ಮಾಡುತ್ತಿವೆ. ಅದರ ಜೊತೆಗೆ ಕೈಗಾರಿಕೆ ಮತ್ತು ಕೈಗಾರಿಕಾ ವ್ಯಾಪಾರದ ನೆರವಿಗಾಗಿ ವಾಣಿಜ್ಯ ಸುಧಾರಣೆಗಳ ಕ್ರಿಯಾ ಯೋಜನೆಯನ್ನು ಇಲಾಖೆಯು ಪರಿಚಯಿಸುತ್ತಿದ್ದು, ಮತ್ತು ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಾಲಯವು ರಾಜ್ಯಕ್ಕೆ ನಿಯಂತ್ರಕ ಅಡ್ಡಿಗಳನ್ನು (regulatory hindrance) ಕಡಿಮೆ ಮಾಡಲು ಸಶಕ್ತಗೊಳಿಸುತ್ತಿದೆ.

2019ರಲ್ಲಿ ಗುಜರಾತ್ ಮತ್ತು ರಾಜಸ್ಥಾನ ರಾಜ್ಯದ ಸರ್ಕಾರಗಳು ಸಹ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಸ್ಥಾಪಿಸಲು ಮತ್ತು ಕಾರ್ಯನಿರ್ವಹಿಸಲು ಕೆಲವು ಅನುಮೋದನೆಗಳು ಮತ್ತು ತಪಾಸಣೆಗಳಿಂದ ವಿನಾಯಿತಿ ನೀಡಲು ಸಮಾನವಾದ ಅಧ್ಯಾದೇಶವನ್ನು ಪರಿಚಯಿಸಿದ್ದವು.

ಮುಂದುವರೆದು ವಾಣಿಜ್ಯ ಕಾರ್ಯಾಚರಣೆಯ ಆರಂಭಕ್ಕೆ ಮೊದಲು ಅಂತಿಮ ಅನುಮೋದನೆಯನ್ನು ಪಡೆದುಕೊಳ್ಳುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗಾಗಿ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು

ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ 12) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ: 33, ಕಡತ ಸಂಖ್ಯೆ: ಸಂವ್ಯಶಾಇ 52 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 24 ಮತ್ತು 3ನೇ ಪಟ್ಟಿಯ 36 ಮತ್ತು 37ನೇಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 484 ದಿನಾಂಕ: 19.10.2020ರಲ್ಲಿ ಪ್ರಕಟಣೆಗೊಂಡಿದೆ]

******

## 2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 45

(2003 ರ ನವೆಂಬರ್ ನಾಲ್ಕನೇ ದಿನಾಂಕದಂದು ಕರ್ನಾಟರ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಕೈಗಾರಿಕೆಗಳ ( ಸೌಲಭ್ಯ ) ಅಧಿನಿಯಮ 2002

(2003ರ ಅಕ್ಟೋಬರ್ ಇಪ್ಪತ್ತೇಳನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರಿಂದ ಅನುಮತಿಯನ್ನು ಪಡೆಯಲಾಗಿದೆ)
(ತಿದ್ದುಪಡಿ ಅಧಿನಿಯಮ 2014ರ 3, 2015ರ 43 ಮತ್ತು 2020ರ 29ರಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಮತ್ತು ಕಾರ್ಯವಿಧಾನ ಅಗತ್ಯತೆಗಳನ್ನು ಕಡಿಮೆ ಮಾಡುವ ಮತ್ತು ದಸ್ತಾವೇಜುಗಳನ್ನು ಸರಳಗೊಳಿಸುವ ಮೂಲಕ ನಿಯಂತ್ರಕ ವ್ಯವಸ್ಥೆಯನ್ನು ಸುಲಭಗೊಳಿಸಲು ಹೊಸ ಹೂಡಿಕೆಗಳ ಸೌಲಭ್ಯಕ್ಕಾಗಿ ಉಪಬಂಧಕಲ್ಪಿಸಲು ಮತ್ತು ಹೂಡಿಕೆದಾರನಿಗೆ ಸ್ನೇಹಪರ ಪರಿಸರವನ್ನು ಕಲ್ಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಪ್ರವರ್ತಕರಿಗೆ ಒಂದೇ ಸ್ಥಳದಲ್ಲಿ ಮಾರ್ಗದರ್ಶನ ಹಾಗೂ ನೆರವನ್ನು ಒದಗಿಸುವ, ಕಾರ್ಯವಿಧಾನ ಅಗತ್ಯತೆಗಳನ್ನು ಕಡಿಮೆ ಮಾಡುವ ಹಾಗೂ ದಸ್ತಾವೇಜುಗಳನ್ನು ಸರಳಗೊಳಿಸುವ ಮೂಲಕ ರಾಜ್ಯದಲ್ಲಿ ಕೈಗಾರಿಕೆ ಮತ್ತು ಇತರ ಯೋಜನೆಗಳ ತ್ವರಿತ ಅನುಷ್ಠಾನಕ್ಕಾಗಿ ಉಪಬಂಧಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ಮೂರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ ಎಂದರೆ.-

### ಅಧ್ಯಾಯ - 1
### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸ ಬಹುದಾದಂತೆ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

ದಿನಾಂಕ: 16.12.2003ರ ಅಧಿಸೂಚನೆ ಸಂಖ್ಯೆ: CI 162 SPI 2001 (Part) dated 16.12.2003 (Karnataka Gazette Part IV-A Extraordinary No. 1671 ಇದರನ್ವಯ ಅಧಿನಿಯಮದ ಎಲ್ಲಾ ಉಪಬಂದಗಳು 22.12.2003ರಿಂದ ಜಾರಿಗೆ ಬಂದಿವೆ.

**2. ಪರಿಭಾಷೆಗಳು :** - ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) "ಅಪೀಲು ಪ್ರಾಧಿಕಾರ" ಎಂದರೆ, 18ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಪೀಲು ಪ್ರಾಧಿಕಾರ;

(iಎ) "ಅನ್ವಯವಾಗುವ ಅಧಿನಿಯಮಗಳು" ಎಂದರೆ, ಕಾರ್ಖಾನೆಗಳ ಅಧಿನಿಯಮ, 1948, ಬಾಯ್ಲರುಗಳ ಅಧಿನಿಯಮ, 1923, ಕರಾರು ಕಾರ್ಮಿಕರ (ವಿನಿಯಮನ ಮತ್ತು ರದ್ಧಿಯಾತಿ) ಅಧಿನಿಯಮ, 1970, ನೌಕರರ ರಾಜ್ಯ ವಿಮಾ ಅಧಿನಿಯಮ, 1948, ಕನಿಷ್ಠ ಮಜೂರಿ ಅಧಿನಿಯಮ, 1948, ಬೋನಸ್ ಸಂದಾಯ ಅಧಿನಿಯಮ, 1956, ಮಜೂರಿ ಸಂದಾಯ ಅಧಿನಿಯಮ, 1936, ಪ್ರಸೂತಿ ಸೌಲಭ್ಯ ಅಧಿನಿಯಮ, 1961, ಉಪದಾನ ಅಧಿನಿಯಮ, 1972, ಸಮಾನ ಪರಿಶ್ರಮ ಧನ ಅಧಿನಿಯಮ, 1976 ಮತ್ತು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961.[2][ಕಾನೂನು ಮಾಪನ ಅಧಿನಿಯಮ, 2009 (2010ರ ಕೇಂದ್ರ ಅಧಿನಿಯಮ 1) ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳು, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18), ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42), ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 76), ಕರ್ನಾಟಕ ಅರಣ್ಯ ನಿಯಮಗಳು, 1969, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12), ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 12), ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34), ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11), ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನೀತಿಗಳು.][2]

(ii) "ಪ್ರಾಧಿಕಾರ" ಎಂಬುದು, ರಾಜ್ಯ ಸರ್ಕಾರವು ಸ್ಥಾಪಿಸಿದ ಮತ್ತು ಒಪ್ಪಿಗೆಗಳನ್ನು ಮಂಜೂರ್ಮಾಡುವ ಅಥವಾ ನೀಡುವ ಅಧಿಕಾರಗಳು ಅಥವಾ ಹೊಣೆಗಾರಿಕೆಯನ್ನು ವಹಿಸಲಾದ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಶಾಸನಬದ್ಧ ಮಂಡಳಿ, ನಿಗಮ ಅಥವಾ ಇತರ ಪ್ರಾಧಿಕಾರವನ್ನು ಒಳಗೊಳ್ಳುತ್ತದೆ;

(iii) "ಒಪ್ಪಿಗೆಗಳು" ಎಂದರೆ, ರಾಜ್ಯದಲ್ಲಿ ಒಂದು ಕೈಗಾರಿಕೆ ಉದ್ಯಮ ಸಂಸ್ಥೆಯನ್ನು ಸ್ಥಾಪಿಸುವ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರ ಅಥವಾ ಯಾವುವೇ ಪ್ರಾಧಿಕಾರಗಳಿಂದ, ಆಕ್ಷೇಪಣೆಗಳಿಲ್ಲ ಎಂಬ ಪ್ರಮಾಣ ಪತ್ರ, ಹಂಚಿಕೆಗಳು, ಒಪ್ಪಿಗೆಗಳು, ಅನುಮೋದನೆಗಳು ಅನುಮತಿಗಳು, ನೋಂದಣಿ, ಪಟ್ಟಿಗೆ ಸೇರಿಸುವುದು, ಲೈಸೆನ್ಸುಗಳ ಮತ್ತು ಅಂಥವುಗಳ ಮಂಜೂರಾತಿ ಅಥವಾ ನೀಡಿಕೆ;

(iv) "ಇಲಾಖೆ" ಎಂದರೆ, ರಾಜ್ಯ ಸರ್ಕಾರದ ಒಂದು ಇಲಾಖೆ;

(v) "ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ" ಎಂದರೆ, 9ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಒಂದು ಸಮಿತಿ;

(vi) "ಉದ್ಯಮದಾರ " ಎಂದರೆ, ಒಂದು ಕೈಗಾರಿಕಾ ಉದ್ಯಮದಲ್ಲಿ ಬಹಳಷ್ಟು ಹೂಡಿಕೆ ಅಥವಾ ನಿಯಂತ್ರಣ ಹಿತಾಸಕ್ತಿಯನ್ನು ಹೊಂದಿರುವ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯ ಅಥವಾ ಒಂದು ಕಂಪನಿ;

(vii) "ಕೈಗಾರಿಕಾ ಉದ್ಯಮ" ಎಂದರೆ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸ ಬಹುದಾದಂತೆ, ಉತ್ಪಾದನೆ ಅಥವಾ ಸಂಸ್ಕರಣೆ ಅಥವಾ ಅವೆರಡೂ ಕಾರ್ಯದಲ್ಲಿ ತೊಡಗಿರುವ ಅಥವಾ ಸೇವೆಯನ್ನು ಒದಗಿಸುವ ಅಥವಾ ಯಾವುದೇ ಇತರ ವ್ಯವಹಾರ ಅಥವಾ ವಾಣಿಜ್ಯ ಚಟುವಟಿಕೆ ನಡೆಸುವ ಒಂದು ಉದ್ಯಮ;

[2][(vii-ಎ) "ಉತ್ಪಾದನಾ ಉದ್ಯಮ" ಎಂದರೆ ಕೈಗಾರಿಕೆಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1951ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕೈಗಾರಿಕೆಗೆ ಸಂಬಂಧಪಟ್ಟ ಸರಕುಗಳ ಉತ್ಪಾದನೆ ಅಥವಾ ತಯಾರಿಕೆಗೆ ಸಂಬಂಧಪಟ್ಟ ಸರಕುಗಳ ಉತ್ಪಾದನೆ ಅಥವಾ ತಯಾರಿಕೆಯಲ್ಲಿ ತೊಡಗಿರುವ ಉದ್ಯಮ, ಅಥವಾ ವಿಶಿಷ್ಟವಾದ ಹೆಸರು ಅಥವಾ ಸ್ವಭಾವ ಅಥವಾ ಉಪಯೋಗವನ್ನು ಹೊಂದಿರುವ ಅಂತಿಮ ಉತ್ಪನ್ನಕ್ಕೆ ಮೌಲ್ಯವರ್ಧನೆಯ ಪ್ರಕ್ರಿಯೆಯಲ್ಲಿ ಬಳಸಲಾದ ಕಾರ್ಖಾನೆ ಮತ್ತು ಯಂತ್ರಘಟಕ.

(vii-ಬಿ) "ಉತ್ಪಾದನಾ ಕೈಗಾರಿಕೆ" ಎಂದರೆ ಪದಾರ್ಥಗಳ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ತೊಡಗಿರುವ ಮತ್ತು ಹೊಸ ಸಾಮಗ್ರಿಗಳ ಸೃಜನೆ ಅಥವಾ ಮೌಲ್ಯ ವರ್ಧನೆಯಲ್ಲಿ ನಿರತವಾಗಿರುವ ಕೈಗಾರಿಕೆ.][2]

(viii) "ನೋಡಲ್ ಏಜನ್ಸಿ" ಎಂದರೆ, 12ನೇ ಪ್ರಕರಣದ ಅಡಿಯಲ್ಲಿ ರಚಿತವಾದ ರಾಜ್ಯಮಟ್ಟದ ಅಥವಾ ಜಿಲ್ಲಾಮಟ್ಟದ ನೋಡಲ್ ಏಜನ್ಸಿ;

(ix) "ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ;

(x) "ರಾಜ್ಯ ಮಟ್ಟದ ಏಕಗವಾಕ್ಷಿ-ಒಪ್ಪಿಗೆ ನೀಡಿಕೆ ಸಮಿತಿ" ಎಂದರೆ, 6ನೇ ಪ್ರಕರಣದ ಅಡಿಯಲ್ಲಿ ರಚಿತವಾದ ರಾಜ್ಯ ಮಟ್ಟದ ಏಕಗವಾಕ್ಷಿ-ಒಪ್ಪಿಗೆ ನೀಡಿಕೆ ಸಮಿತಿ;

[1][(xi) **'ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿ'** ಎಂದರೆ, 11ಎ ಪ್ರಕರಣದ ಅಡಿಯಲ್ಲಿ ರಚಿಸಲಾದ ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿ][1]

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 4.01.2014 ರಿಂದ ಸೇರಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 02.07.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

# ಅಧ್ಯಾಯ -II

**3. ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ:-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತ ಅಂಥ ಸದಸ್ಯರುಗಳನ್ನು ಒಳಗೊಂಡ [2][ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ][2] ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಎಂದು ಕರೆಯಲಾಗುವ ಏಕ ಹಂತ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸಬಹುದು.

(2) ಸಮಿತಿಯು, ಪ್ರತಿಯೊಂದು ಪ್ರಕರಣದಲ್ಲಿ [3][[1][ಐದು ನೂರು ಕೋಟಿ ರೂಪಾಯಿಗಳು]][1]][3] ಮತ್ತು ಅದಕ್ಕೂ ಹೆಚ್ಚಿನ ಹೂಡಿಕೆಯೊಡನೆ ರಾಜ್ಯದಲ್ಲಿ ಸ್ಥಾಪಿಸಲಾಗುವ ಯಾವುದೇ ಕೈಗಾರಿಕೆ ಅಥವಾ ಇತರ ಯೋಜನೆಗಳಿಗೆ ಸಂಬಂಧಪಡುವ ಯಾವೊಬ್ಬ ಉದ್ಯಮ ದಾರನಿಂದ ಸ್ವೀಕರಿಸಿದ ಪ್ರಸ್ತಾವಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಪರಿಗಣಿಸತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 4.01.2014 ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 43ರ ಮೂಲಕ ದಿನಾಂಕ: 28.12.2015 ರಿಂದ ಸೇರಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 43ರ ಮೂಲಕ ದಿನಾಂಕ: 28.12.2015 ರಿಂದ ಪ್ರತಿಯೋಜಿಸಲಾಗಿದೆ.

(3) ಸಮಿತಿಯ ಸದಸ್ಯನು ಸ್ವತಃ ಸಭೆಗೆ ಹಾಜರಾಗತಕ್ಕದ್ದು ಮತ್ತು ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಸಭೆಯಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲು ಲಿಖಿತ ಅಧಿಕಾರ ಪತ್ರದೊಡನೆ ಸಭೆಗೆ ಹಾಜರಾಗುವುದಕ್ಕಾಗಿ ಹಿರಿಯ ಹಂತದ ಒಬ್ಬ ಅಧಿಕಾರಿಯನ್ನು ಪ್ರತಿಯೋಜಿಸಬಹುದು.

**4. ಸಮಿತಿಯ ಪ್ರಕಾರ್ಯಗಳು:-** (1) ಸಮಿತಿಯು, ನಿಯಮಿಸಬಹುದಾದಂತೆ ಅಂಥ ಸಮಯಗಳಲ್ಲಿ ಮತ್ತು ಅಂಥ ಸ್ಥಳಗಳಲ್ಲಿ ಸಭೆಸೇರತಕ್ಕದ್ದು ಮತ್ತು ತನ್ನ ವ್ಯವಹಾರಗಳನ್ನು ನಿರ್ವಹಿಸಲು ಅಂಥ ಕಾರ್ಯವಿಧಾನವನ್ನು ಅಂಗೀಕರಿಸತಕ್ಕದ್ದು.

(2) ಸಮಿತಿಯು 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸುವುದಕ್ಕಾಗಿನ ಪ್ರಸ್ತಾವಗಳನ್ನು ಪರೀಕ್ಷಿಸತಕ್ಕದ್ದು ಮತ್ತು ತೀರ್ಮಾನ ಕೈಗೊಳ್ಳತಕ್ಕದ್ದು ಮತ್ತು ಉದ್ಯಮದಾರನಿಗೆ ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ಅಥವಾ ಪ್ರಾಧಿಕಾರಗಳಿಗೆ ನಿಯಮಿಸಬಹುದಾದಂತೆ ಅಂಥ ಅವಧಿಯೊಳಗೆ ತನ್ನ ತೀರ್ಮಾನವನ್ನು ತಿಳಿಸತಕ್ಕದ್ದು.

**5. ಸಮಿತಿಯ ಅಧಿಕಾರಗಳು:-** ಸಮಿತಿಯು, ತನ್ನ ಮುಂದೆ ಮಂಡಿಸಲಾದ ಯೋಜನೆಗಳಿಗೆ ಅನುಮೋದನೆಗಳನ್ನು ನೀಡುವಲ್ಲಿ ಅಂತಿಮ ಪ್ರಾಧಿಕಾರವಾಗಿರತಕ್ಕದ್ದು. ಸಮಿತಿಯು ನೀಡಿದ ಅನುಮೋದನೆಗಳಿಗೆ ಎಲ್ಲ ಸಂಬಂಧಪಟ್ಟ ಇಲಾಖೆಗಳು ಅಥವಾ ಪ್ರಾಧಿಕಾರಗಳು ಬದ್ಧವಾಗಿರತಕ್ಕದ್ದು ಮತ್ತು ಅಂಥ ಇಲಾಖೆಗಳು ಅಥವಾ ಪ್ರಾಧಿಕಾರಗಳು, ನಿಗದಿಪಡಿಸಿದ ಅವಧಿಯೊಳಗೆ ಮತ್ತು ಉದ್ಯಮದಾರನು ಕೇಂದ್ರ ಅಥವಾ ರಾಜ್ಯ ಅಧಿನಿಯಮಗಳ ಮತ್ತು ಅವುಗಳ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಪಾಲಿಸುವುದಕ್ಕೊಳಪಟ್ಟು ಅಗತ್ಯವಾದ ಒಪ್ಪಿಗೆಗಳನ್ನು ನೀಡತಕ್ಕದ್ದು.

**6. ರಾಜ್ಯಮಟ್ಟದ ಏಕಗವಾಕ್ಷಿ-ಒಪ್ಪಿಗೆ ನೀಡಿಕೆ ಸಮಿತಿ:-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಸದಸ್ಯರುಗಳನ್ನು ಒಳಗೊಂಡ [2][ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಅಧ್ಯಕ್ಷತೆಯಲ್ಲಿ][2] 'ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ' ಎಂದು ಕರೆಯಲಾಗುವ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸಬಹುದು.

(2) ರಾಜ್ಯ ಮಟ್ಟದ ಏಕಗವಾಕ್ಷಿ - ಒಪ್ಪಿಗೆ ನೀಡಿಕೆ ಸಮಿತಿಯು, [1][ಹದಿನೈದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಮತ್ತು [3][ಐದು ನೂರು ಕೋಟಿ ರೂಪಾಯಿಗಳಿಗಿಂತ][3] ಕಡಿಮೆ][1] ಹೂಡಿಕೆಯೊಡನೆ, ರಾಜ್ಯದಲ್ಲಿ ಸ್ಥಾಪಿಸಲಾಗುವ ಕೈಗಾರಿಕೆ ಮತ್ತು ಇತರ ಯೋಜನೆಗಳಿಗೆ ಸಂಬಂಧಪಡುವ, ಉದ್ಯಮದಾರರಿಂದ ಸ್ವೀಕರಿಸಲಾದ ಪ್ರಸ್ತಾವವನ್ನು ಪರೀಕ್ಷಿಸತಕ್ಕದ್ದು ಮತ್ತು ಪರಿಗಣಿಸತಕ್ಕದ್ದು.

(3) ಸಮಿತಿಯ ಸದಸ್ಯನು ಸ್ವತಃ ಸಭೆಗಳಿಗೆ ಹಾಜರಾಗತಕ್ಕದ್ದು ಮತ್ತು ಹಾಜರಾಗಲು ಸಾಧ್ಯವಾಗದಿದ್ದಲ್ಲಿ

ಸಭೆಯಲ್ಲಿ, ಸೂಕ್ತ ತೀರ್ಮಾನ ಕೈಗೊಳ್ಳುವುದಕ್ಕಾಗಿ ಲಿಖಿತ ಅಧಿಕಾರ ಪತ್ರದೊಡನೆ ಒಬ್ಬ ಹಿರಿಯ ಮಟ್ಟದ ಅಧಿಕಾರಿಯನ್ನು ಪ್ರತಿನಿಯೋಜಿಸಬಹುದು.

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 4.01.2014 ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ 43ರ ಮೂಲಕ ದಿನಾಂಕ: 28.12.2015 ರಿಂದ ಸೇರಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 43ರ ಮೂಲಕ ದಿನಾಂಕ: 28.12.2015 ರಿಂದ ಪ್ರತಿಯೋಜಿಸಲಾಗಿದೆ.

**7. ಸಮಿತಿಯ ಪ್ರಕಾರ್ಯಗಳು:-** (1) ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯು, ನಿಯಮಿಸಬಹುದಾದಂತೆ ಅಂಥ ಸಮಯಗಳಲ್ಲಿ ಮತ್ತು ಅಂಥ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ವ್ಯವಹಾರಗಳನ್ನು ನಿರ್ವಹಿಸಲು ಅಂಥ ಕಾರ್ಯ ವಿಧಾನಗಳನ್ನು ಅನುಸರಿಸತಕ್ಕದ್ದು.

(2) ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯು 6ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸುವುದಕ್ಕಾಗಿನ ಪ್ರಸ್ತಾವಗಳನ್ನು ಪರೀಕ್ಷಿಸತಕ್ಕದ್ದು ಮತ್ತು ತೀರ್ಮಾನ ಕೈಗೊಳ್ಳತಕ್ಕದ್ದು ಮತ್ತು ಸಭೆ ನಡೆದ ಒಂದು ವಾರದೊಳಗೆ ಸಂಬಂಧಪಟ್ಟ ಉದ್ಯಮದಾರನಿಗೆ ಮತ್ತು ಇಲಾಖೆಗಳು ಅಥವಾ ಪ್ರಾಧಿಕಾರಗಳಿಗೆ ತನ್ನ ತೀರ್ಮಾನದ ಬಗ್ಗೆ ತಿಳಿಸತಕ್ಕದ್ದು.

**8. ಸಮಿತಿಯ ಅಧಿಕಾರಗಳು:-** ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯು ತನ್ನ ಮುಂದೆ ಮಂಡಿಸಲಾದ ಯೋಜನೆಗಳಿಗೆ ಅನುಮೋದನೆಗಳನ್ನು ನೀಡುವಲ್ಲಿ ಅಂತಿಮ ಪ್ರಾಧಿಕಾರವಾಗಿರತಕ್ಕದ್ದು. ಸಮಿತಿಯು ನೀಡಿದ ಅನುಮೋದನೆಗಳಿಗೆ ಸಂಬಂಧಪಟ್ಟ ಇಲಾಖೆಗಳು ಅಥವಾ ಪ್ರಾಧಿಕಾರಗಳು ಬದ್ಧವಾಗಿರತಕ್ಕದ್ದು ಮತ್ತು ಅಂಥ ಇಲಾಖೆಗಳು ಅಥವಾ ಪ್ರಾಧಿಕಾರಗಳು, ನಿಗದಿಪಡಿಸಿದ ಅವಧಿಯೊಳಗೆ ಮತ್ತು ಉದ್ಯಮದಾರನು ಮಾಡಿದ, ಕೇಂದ್ರ ಅಥವಾ ರಾಜ್ಯ ಅಧಿನಿಯಮಗಳ ಅಥವಾ ಅದರ ಅಡಿಯಲ್ಲಿ ಮಾಡಿದ ನಿಯಮಗಳ ಉಪಬಂಧಗಳನ್ನು ಪಾಲಿಸುವುದಕ್ಕೊಳಪಟ್ಟು ಅಗತ್ಯವಾದ ಒಪ್ಪಿಗೆಯನ್ನು ನೀಡತಕ್ಕದ್ದು.

**9. ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ:-** (1) ರಾಜ್ಯಸರ್ಕಾರವು, ಅಧಿಸೂಚನೆಯ ಮೂಲಕ, ಜಿಲ್ಲಾಮಟ್ಟದಲ್ಲಿ, ನಿಯಮಿಸಬಹುದಾದಂತೆ, ಅಂಥ ಸದಸ್ಯರನ್ನೊಳಗೊಂಡ "ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ" ಎಂದು ಕರೆಯಲಾಗುವ ಒಂದು ಏಕಹಂತ ಒಪ್ಪಿಗೆ ನೀಡಿಕೆ ಸಮಿತಿಯನ್ನು ರಚಿಸತಕ್ಕದ್ದು. ಜಿಲ್ಲಾಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯು [1][ಹದಿನೈದು ಕೋಟಿ ರೂಪಾಯಿಗಳ][1] ವರೆಗಿನ ಹೂಡಿಕೆಯೊಂದಿಗೆ ಆಯಾ ಜಿಲ್ಲೆಗಳಲ್ಲಿ ಸ್ಥಾಪಿಸಲಾಗುವ ಪ್ರತಿಯೊಂದು ಕೈಗಾರಿಕಾ ಯೋಜನೆಗಳಿಗೆ ಸಂಬಂಧಪಡುವ ಉದ್ಯಮದಾರರಿಂದ ಸ್ವೀಕರಿಸಲಾದ ಪ್ರಸ್ತಾವವನ್ನು ಪರೀಕ್ಷಿಸತಕ್ಕದ್ದು ಮತ್ತು ಪರಿಗಣಿಸತಕ್ಕದ್ದು.

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 4.01.2014 ರಿಂದ ಪ್ರತಿಯೋಜಿಸಲಾಗಿದೆ.

(2) ಸಮಿತಿಯ ಸದಸ್ಯನು, ಸ್ವತಃ ಸಭೆಗಳಿಗೆ ಹಾಜರಾಗತಕ್ಕದ್ದು ಮತ್ತು ಅವನು ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ ಸಭೆಯಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳು ವುದಕ್ಕಾಗಿ ಲಿಖಿತ ಅಧಿಕಾರಪತ್ರದೊಡನೆ ಒಬ್ಬ ಹಿರಿಯ ಹಂತದ ಅಧಿಕಾರಿಯನ್ನು ಪ್ರತಿನಿಯೋಜಿಸಬಹುದು.

**10. ಸಮಿತಿಯ ಪ್ರಕಾರ್ಯಗಳು:-** (1) ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯು ನಿಯಮಿಸಬಹುದಾದಂತೆ ಅಂಥ ಸಮಯಗಳಲ್ಲಿ ಮತ್ತು ಅಂಥ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ವ್ಯವಹಾರಗಳನ್ನು ನಿರ್ವಹಿಸಲು ಅಂಥ ಕಾರ್ಯ ವಿಧಾನಗಳನ್ನು ಅನುಸರಿಸತಕ್ಕದ್ದು.

(2) ಜಿಲ್ಲಾಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯು, 9ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸುವುದಕ್ಕಾಗಿನ ಪ್ರಸ್ತಾವಗಳನ್ನು ಪರೀಕ್ಷಿಸತಕ್ಕದ್ದು ಮತ್ತು ತೀರ್ಮಾನ ಕೈಗೊಳ್ಳತಕ್ಕದ್ದು ಮತ್ತು ನಿಯಮಿಸಬಹುದಾದಂತೆ ಅಂಥ ಸಮಯದೊಳಗೆ ಸಂಬಂಧಪಟ್ಟ ಉದ್ಯಮದಾರನಿಗೆ ಮತ್ತು ಇಲಾಖೆಗಳಿಗೆ ಅಥವಾ ಪ್ರಾಧಿಕಾರಗಳಿಗೆ ತನ್ನ ತೀರ್ಮಾನದ ಬಗ್ಗೆ ತಿಳಿಸತಕ್ಕದ್ದು.

**11. ಸಮಿತಿಯ ಅಧಿಕಾರಗಳು:–** ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯು ತನ್ನ ಮುಂದೆ ಮಂಡಿಸಲಾದ ಯೋಜನೆಗಳಿಗೆ ಅನುಮೋದನೆಗಳನ್ನು ನೀಡುವಲ್ಲಿ ಅಂತಿಮ ಪ್ರಾಧಿಕಾರವಾಗಿರತಕ್ಕದ್ದು. ಜಿಲ್ಲಾಮಟ್ಟದಲ್ಲಿ ಸಮಿತಿಯು ನೀಡಿದ ಅನುಮೋದನೆಗಳಿಗೆ ಸಂಬಂಧಪಟ್ಟ ಇಲಾಖೆಗಳು ಅಥವಾ ಪ್ರಾಧಿಕಾರಗಳು ಬದ್ಧವಾಗಿರತಕ್ಕದ್ದು ಮತ್ತು ಅಂಥ ಇಲಾಖೆಗಳು ಅಥವಾ ಪ್ರಾಧಿಕಾರಗಳು, ನಿಗದಿಪಡಿಸಿದ ಅವಧಿಯೊಳಗೆ ಮತ್ತು ಉದ್ಯಮದಾರನು, ಅನ್ವಯವಾಗುವ ಕೇಂದ್ರ ಅಥವಾ ರಾಜ್ಯ ಅಧಿನಿಯಮಗಳ ಮತ್ತು ಅವುಗಳ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಪಾಲಿಸುವುದ ಕ್ಕೊಳಪಟ್ಟು, ಅಗತ್ಯವಾದ ಒಪ್ಪಿಗೆಯನ್ನು ನೀಡತಕ್ಕದ್ದು.

[1][**11ಎ. ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿ.–** (1) ಸರ್ಕಾರವು ಈ ಮುಂದಿನವರನ್ನು ಒಳಗೊಂಡ ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಯನ್ನು ರಚಿಸಬಹುದು, ಎಂದರೆ:–

| | | |
|---|---|---|
| ಎ | ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |
| ಬಿ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ | ಸದಸ್ಯರು |
| ಸಿ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ | ಸದಸ್ಯರು |
| ಡಿ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ | ಸದಸ್ಯರು |
| ಇ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ | ಸದಸ್ಯರು |
| ಎಫ್ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ | ಸದಸ್ಯರು |
| ಜಿ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ | ಸದಸ್ಯರು |
| ಎಚ್ | ಸರ್ಕಾರದ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆ | ಸದಸ್ಯರು |
| ಐ | ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ (ಸಣ್ಣ ಪ್ರಮಾಣದ ಕೈಗಾರಿಕೆಗಳು, ಜವಳಿ ಮತ್ತು ಗಣಿ) | ಸದಸ್ಯರು |
| ಜೆ | ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕೃಷಿ ಇಲಾಖೆ | ಸದಸ್ಯರು |
| ಕೆ | ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ | ಸದಸ್ಯರು |
| ಎಲ್ | ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ | ಸದಸ್ಯರು |
| ಎಮ್ | ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ | ಸದಸ್ಯರು |
| ಎನ್ | ಪೊಲೀಸು ಮಹಾ ನಿರ್ದೇಶಕರು ಮತ್ತು ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳು | ಸದಸ್ಯರು |
| ಒ | ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯನಿರ್ವಹಣಾ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ಬೆಂಗಳೂರು | ಸದಸ್ಯರು |
| ಪಿ | ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

**ಟಿಪ್ಪಣಿ:–** ಈ ಪ್ರಕರಣದ ಉದ್ದೇಶಕ್ಕಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಎಂದರೆ, "ಕೈಗಾರಿಕೆಗಳು (ಸೌಲಭ್ಯ)" ವಿಷಯದ ಪ್ರಭಾರವನ್ನು ಹೊಂದಿರುವ ಸರ್ಕಾರದ ಕಾರ್ಯದರ್ಶಿಗಳು ಅಥವಾ ಪ್ರಧಾನ ಕಾರ್ಯದರ್ಶಿಗಳು ಅಥವಾ ಅಪರ ಮುಖ್ಯ ಕಾರ್ಯದರ್ಶಿಗಳು.

(2) ಸಮಿತಿಯು, ಅವಶ್ಯವಿದ್ದಲ್ಲಿ ಅಂಥ ಪರಿಣತಿ ಅಥವಾ ಜ್ಞಾನವನ್ನುಳ್ಳ ವ್ಯಕ್ತಿಯನ್ನು ಸಹ–ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು.

(3) ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಯ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು,–

(i) ರಾಜ್ಯ ಮಟ್ಟದ ಏಕಗವಾಕ್ಷಿ–ಒಪ್ಪಿಗೆ ನೀಡಿಕೆ ಸಮಿತಿ ಮತ್ತು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯು ಒಪ್ಪಿಗೆ ನೀಡಿದ ಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು;

(ii) ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.][1]

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 4.01.2014 ರಿಂದ ಸೇರಿಸಲಾಗಿದೆ.

**12. ನೋಡಲ್ ಏಜೆನ್ಸಿಗಳ ನೇಮಕ:-** ರಾಜ್ಯ ಸರ್ಕಾರವು, ಹೂಡಿಕೆಗೆ ಉತ್ತೇಜನ ನೀಡುವ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಮತ್ತು ರಾಜ್ಯದಲ್ಲಿ ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸಲು ಉದ್ಯಮದಾರರಿಗೆ ಅಗತ್ಯ ಮಾರ್ಗದರ್ಶನ ಮತ್ತು ನೆರವನ್ನು ನೀಡಲು, ಅಧಿಸೂಚನೆಯ ಮೂಲಕ, ರಾಜ್ಯಮಟ್ಟದಲ್ಲಿ, ಕರ್ನಾಟಕ ಉದ್ಯೋಗ ಮಿತ್ರವನ್ನು 'ನೋಡಲ್ ಏಜೆನ್ಸಿ' ಎಂಬುದಾಗಿ ಮತ್ತು ಜಿಲ್ಲಾಮಟ್ಟದಲ್ಲಿ, ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು 'ಜಿಲ್ಲಾ ನೋಡಲ್ ಏಜೆನ್ಸಿ' ಎಂಬುದಾಗಿ ನೇಮಕ ಮಾಡಬಹುದು.

**13. ನೋಡಲ್ ಏಜೆನ್ಸಿಗಳ ಪ್ರಕಾರ್ಯಗಳು:-** (1) ಜಿಲ್ಲಾ ಮಟ್ಟದಲ್ಲಿ ನೋಡಲ್ ಏಜೆನ್ಸಿಯ ಪ್ರಕಾರ್ಯಗಳು ಇತರೆ ವಿಷಯಗಳೊಂದಿಗೆ ಈ ಮುಂದಿನವುಗಳನ್ನು ಒಳಗೊಳ್ಳತಕ್ಕದ್ದು.-

(ಎ) ಹೂಡಿಕೆಗೆ ಉತ್ತೇಜನ ನೀಡುವ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು.

(ಬಿ) ಕೈಗಾರಿಕಾ ಪ್ರಗತಿಗಾಗಿ ಕಾರ್ಯನೀತಿ ರೂಪಿಸುವಲ್ಲಿ ಅಗತ್ಯ ನೆರವನ್ನು ನೀಡುವುದು;

(ಸಿ) ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮದಾರರಿಗೆ ಮಾರ್ಗದರ್ಶನ ಮತ್ತು ನೆರವು ನೀಡುವುದು;

(ಡಿ) ಉದ್ಯಮದಾರರಿಗೆ ಸಂಯೋಜಿತ ಅರ್ಜಿನಮೂನೆಯನ್ನು ನೀಡುವುದು ಮತ್ತು ಅವರಿಂದ ನಮೂನೆಗಳನ್ನು ಸ್ವೀಕರಿಸುವುದು ಮತ್ತು ಗೊತ್ತುಪಡಿಸಿದ ಸಮಯದೊಳಗೆ ಇಲಾಖೆಗಳು ಮತ್ತು ಪ್ರಾಧಿಕಾರಗಳಿಂದ ಅಗತ್ಯ ಒಪ್ಪಿಗೆ ನೀಡಿಕೆಗಳನ್ನು ಸಹ ವ್ಯವಸ್ಥೆಗೊಳಿಸುವುದು.

(ಇ) ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಗೆ, ರಾಜ್ಯ ಮಟ್ಟದ ಏಕಗವಾಕ್ಷಿ- ಒಪ್ಪಿಗೆ ನೀಡಿಕೆ ಸಮಿತಿಗೆ ಮತ್ತು ಜಿಲ್ಲಾಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಲಿಪಿಕ ಸಿಬ್ಬಂದಿಯ ಸೌಲಭ್ಯವನ್ನು ಒದಗಿಸುವುದು;

(ಎಫ್) ಪರಿಸರ ಸ್ನೇಹಪರ ಮತ್ತು ಸುಸ್ಪಷ್ಟ ತಂತ್ರಜ್ಞಾನ ಮತ್ತು ಉತ್ಪಾದನಾ ಪದ್ಧತಿಗಳನ್ನು ವೃದ್ಧಿಗೊಳಿಸುವುದು;

(ಜಿ) ರಾಜ್ಯಸರ್ಕಾರವು ಅದಕ್ಕೆ ವಹಿಸಬಹುದಾದ ಯಾವುದೇ ಇತರೆ ಪ್ರಕಾರ್ಯಗಳನ್ನು ನಿರ್ವಹಿಸುವುದು.

[1][(ಎಚ್) ಉತ್ಪಾದನಾ ಕೈಗಾರಿಕೆಗಳು ಅಥವಾ ಉದ್ಯಮಗಳಿಂದ ಸಂಯೋಜಿತ ಅರ್ಜಿ ನಮೂನೆಯನ್ನು ಸ್ವೀಕರಿಸಿದ ಮೇಲೆ, ಸಂಬಂಧಪಟ್ಟ ನೋಡಲ್ ಏಜೆನ್ಸಿಯು ಹೂಡಿಕೆ ಸಮಿತಿಗಳಿಂದ ಅಂದರೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ, ರಾಜ್ಯ ಮಟ್ಟದ ಏಕಗವಾಕ್ಷಿ, ಒಪ್ಪಿಗೆ ನೀಡಿಕೆ ಸಮಿತಿ ಅಥವಾ ಜಿಲ್ಲಾ ಮಟ್ಟದ ಏಕಗವಾಕ್ಷಿ, ಒಪ್ಪಿಗೆ ನೀಡಿಕೆ ಸಮಿತಿಗಳ ಅನುಮೋದನೆಯನ್ನು ಪಡೆದ ತರುವಾಯ, ನಿಯಮಿಸಿದ ನಮೂನೆಯಲ್ಲಿ ಅರ್ಜಿದಾರರಿಗೆ ಸ್ವೀಕೃತಿ ಪ್ರಮಾಣ ಪತ್ರವನ್ನು ಹೊರಡಿಸತಕ್ಕದ್ದು:

ಪರಂತು, ಯಾವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಅಥವಾ ಅದನ್ನು ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಭೂಮಿಯನ್ನು ಪರಿಗಣಿಸತಕ್ಕದ್ದು.][1]

(2) ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು ಮತ್ತು ಇದರೊಂದಿಗೆ, ಈ ಮುಂದಿನವುಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣ ವಿವರಗಳನ್ನೊಳಗೊಂಡ ಉದ್ಯಮದಾರರ ಮಾರ್ಗದರ್ಶಿಯೊಂದನ್ನು ತಯಾರಿಸತಕ್ಕದ್ದು ಮತ್ತು ನಿಯತವಾಗಿ ಅದನ್ನು ಇಂದಿನವರೆಗೆ ಪರಿಷ್ಕರಿಸತಕ್ಕದ್ದು.-

(i) ರಾಜ್ಯ ಮತ್ತು ಕೇಂದ್ರ ಕೈಗಾರಿಕಾ ನೀತಿಗಳು;

(ii) ಇಲಾಖೆ ಮತ್ತು ಪ್ರಾಧಿಕಾರಗಳಿಂದ ಅಗತ್ಯವಿರುವ ಒಪ್ಪಿಗೆಗಳನ್ನು ಪಡೆಯಲು ಇರುವ ಕಾರ್ಯವಿಧಾನಗಳು;

(iii) ರಾಜ್ಯದಲ್ಲಿ ಈಗ ಇರುವ ಕೈಗಾರಿಕಾ ಸ್ಥಾನಮಾನಗಳ ಮತ್ತು ಪ್ರಯೋಜನಗಳ ಬಗ್ಗೆ ಮಾಹಿತಿ;

(iv) ಒಂದು ಕೈಗಾರಿಕೋದ್ಯಮಕ್ಕೆ ಅನ್ವಯವಾಗುವ ಅಧಿನಿಯಮಗಳು ಮತ್ತು ಅವುಗಳ ಅಡಿಯಲ್ಲಿ ರಚಿಸಲಾದ ನಿಯಮಗಳ ಮುಖ್ಯಾಂಶಗಳು;

(v) ಉದ್ಯಮದಾರರಿಗೆ ಪ್ರಯೋಜನಕಾರಿಯಾಗುವ ಇತರ ಯಾವುದೇ ಮಾಹಿತಿ.

[1][(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮದ ಸಂಬಂಧದಲ್ಲಿ, (1)ನೇ ಉಪಪ್ರಕರಣದ (ಎಚ್) ಖಂಡದ ಅಡಿಯಲ್ಲಿ ಹೊರಡಿಸಿದ ಸ್ವೀಕೃತಿ ಪ್ರಮಾಣ ಪತ್ರವು, ಸಂಬಂಧಿತ ಇಲಾಖೆಗಳು ಮಂಜೂರು ಮಾಡಿದ ಅಥವಾ ಹೊರಡಿಸಿದ ಪ್ರಾರಂಭಿಕ ಮೂರು ವರ್ಷಗಳ ಅವಧಿಗಾಗಿ ಅಥವಾ ವಾಣಿಜ್ಯ ಕಾರ್ಯಾಚರಣೆಗಳ ಆರಂಭದ ದಿನಾಂಕದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ, ಅದರ ಸ್ವೀಕೃತಿಯ ದಿನಾಂಕದಿಂದ, 2ನೇ ಪ್ರಕರಣದ (iii)ನೇ ಉಪಪ್ರಕರಣದಲ್ಲಿ ಪರಿಭಾಷಿಸಿದಂತೆ ಕೈಗಾರಿಕೆಯ ರಚನೆ ಅಥವಾ ಸ್ಥಾಪನೆಗಾಗಿ ಒಪ್ಪಿಗೆ ನೀಡಿಕೆಗಳು ಎಂಬುದಾಗಿ ಭಾವಿಸತಕ್ಕದ್ದು:

ಪರಂತು, ಕೈಗಾರಿಕೆಯ ರಚನೆಗಾಗಿ ಅಂಥ ಭಾವಿತ ಒಪ್ಪಿಗೆ ನೀಡಿಕೆಯು, ಯಾವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಅಥವಾ ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ಭೂಮಿಗೆ ಮಾತ್ರವೇ ಆಗಿರತಕ್ಕದ್ದು. ಮುಂದುವರೆದು, ಕಟ್ಟಡ ಉಪವಿಧಿಯ ಅನುಸಾರವಾಗಿ ನಿರ್ಮಾಣದಲ್ಲಿ ಮತ್ತು ಅನ್ವಯಿಸಬಹುದಾದ ಯಾವುದೇ ಅಧಿನಿಯಮ ಅಥವಾ ಅಂಥ ನಕ್ಷೆಯು ಜಾರಿಯಲ್ಲಿರುವ ಪ್ರಮುಖ ನಕ್ಷೆಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಯ ಬಳಕೆಯಲ್ಲಿ ಯಾವುದೇ ಅನ್ಯಮಾರ್ಗವಿರತಕ್ಕದ್ದಲ್ಲ;

ಮತ್ತು ಪರಂತು, ಅನುಮೋದನೆಗಳು ಸ್ಪಷ್ಟ ಹಕ್ಕು (clear title) ಇಲ್ಲದ ಭೂಮಿ ಅಥವಾ ವಿವಾದಿತ, ನಿರ್ಬಂಧಿತ ಪ್ರವರ್ಗಗಳು ಮುಂತಾದವುಗಳ ಅಡಿಯಲ್ಲಿ ಬರುವ ಭೂಮಿಗಳ ಬಳಕೆಗಾಗಿ ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮಗಳನ್ನು ಹಕ್ಕುಳ್ಳವರನ್ನಾಗಿ ಮಾಡತಕ್ಕದ್ದಲ್ಲ. ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸ್ವಾಧೀನ ಪಡಿಸಿಕೊಳ್ಳಬಹುದಾದ ಅಥವಾ ಬಳಸಬಹುದಾದ ಪ್ರದೇಶದ ಗರಿಷ್ಠ ಪರಿಮಿತಿಯಲ್ಲಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) 109ನೇ ಪ್ರಕರಣದ ಅಡಿಯಲ್ಲಿನ ಉಪಬಂಧಗಳಲ್ಲಿರುವಂತೆ ಮಿತಿಯಲ್ಲಿರತಕ್ಕದ್ದು.

**ವಿವರಣೆ:** (3)ನೇ ಉಪಪ್ರಕರಣದ ಅನುಸಾರವಾಗಿ ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು ಸ್ಥಾಪನೆಯಾದರೆ, ವಾಣಿಜ್ಯ ಕಾರ್ಯಾಚರಣೆಯ ಪ್ರಾರಂಭಕ್ಕೆ ಮೊದಲು, 14ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಅನುಸಾರವಾಗಿ ಅಗತ್ಯ ಒಪ್ಪಿಗೆಗಳನ್ನು ಅರ್ಜಿದಾರರು ಪಡೆಯುವುದು.

(4) ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಮತ್ತು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗೆ ಹಲವು ಶಾಸನಗಳು, ಅಧಿನಿಯಮಗಳು, ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ನೋಡಲ್ ಏಜೆನ್ಸಿಯ ಮೇರೆಗೆ ವಹಿಸಲಾದ ಹಲವು ಆಡಳಿತಾತ್ಮಕ ಅಥವಾ ಕ್ರಮಕೈಗೊಳ್ಳುವ ಇಲಾಖೆಗಳಿಗೆ (line departments) ನೆರವು ನೀಡುವುದು.

(5) ಅರ್ಜಿಗಳು ಅಥವಾ ಪ್ರಸ್ತಾವನೆಗಳು ಮತ್ತು ಹೊರಡಿಸಿದ ಸ್ವೀಕೃತಿ ಪ್ರಮಾಣ ಪತ್ರದ ದಾಖಲೆಯನ್ನು ನಿಗಾವಹಿಸುವುದು ಮತ್ತು ನಿರ್ವಹಿಸುವುದು.

(6) ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು, ಎಲ್ಲಾ ಯೋಜನೆ ಅರ್ಜಿಗಳು, ಅನುಮೋದನೆಗಳು ಅಥವಾ ಸ್ವೀಕೃತಿಗಳ ದತ್ತಾಂಶಮೂಲವನ್ನು (database) ಕೇಂದ್ರ ಸಂಗ್ರಹವಾಗಿ ಆನ್‌ಲೈನ್ ವ್ಯವಸ್ಥೆಗಳ ಮೂಲಕ ನಿರ್ವಹಿಸುವುದು.

**ವಿವರಣೆ:** ಸ್ವೀಕೃತಿ ಪ್ರಮಾಣ ಪತ್ರದ ವ್ಯಾಪ್ತಿಯ ಅಡಿಯಲ್ಲಿ ಅಗತ್ಯವಾಗಿ ಬರಬೇಕಾದ ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳನ್ನು ಉತ್ಪಾದನಾ ಉದ್ಯಮಗಳ ಪ್ರಾರಂಭಿಕ ಮೂರು ವರ್ಷಗಳ ಅವಧಿಗಾಗಿ ಅಥವಾ ವಾಣಿಜ್ಯ ಕಾರ್ಯಾಚರಣೆಯ ಆರಂಭದ ದಿನಾಂಕದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇಲಾಖೆಗಳು ನೀಡಿದ ಒಪ್ಪಿಗೆ ನೀಡಿಕೆಗಳೆಂದು ಪರಿಗಣಿಸತಕ್ಕದ್ದು. ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳ ಪಟ್ಟಿಯು 2ನೇ ಪ್ರಕರಣದ (iii)ನೇ ಖಂಡದಲ್ಲಿ ಪರಿಭಾಷಿಸಿದ ಒಪ್ಪಿಗೆ ನೀಡಿಕೆಗಳನ್ನು ಒಳಗೊಂಡಿರತಕ್ಕದ್ದು.][1]

1. 2020ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 02.07.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**14. ಸಂಯೋಜಿತ ಅರ್ಜಿ ನಮೂನೆಗಳು (Combined Application Forms) (CAF).-** [2][(1)][2] ರಾಜ್ಯ ಸರ್ಕಾರವು, ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ರಾಜ್ಯ ಉನ್ನತ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯಿಂದ ಒಪ್ಪಿಗೆಯನ್ನು ಪಡೆಯುವುದಕ್ಕಾಗಿ ಉದ್ಯಮಿಗಳ ಬಳಕೆಗಾಗಿ ಸಂಯೋಜಿತ ಅರ್ಜಿ ನಮೂನೆಯೊಂದನ್ನು ನಿಯಮಿಸಬಹುದು. ಅಗತ್ಯಪಡಿಸಿದ ಒಪ್ಪಿಗೆಗಳನ್ನು ಪಡೆಯುವುದಕ್ಕಾಗಿ ಕಾರ್ಖಾನೆಗಳ ಅಧಿನಿಯಮ, 1948ರ 41ಎ ಪ್ರಕರಣದಲ್ಲಿ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಕಾರ್ಖಾನೆಗೆ ಲೈಸೆನ್ಸು ನೀಡುವುದಕ್ಕಾಗಿನ ಅರ್ಜಿಯನ್ನು

ಹೊರತುಪಡಿಸಿ ಅನ್ವಯವಾಗುವ ಕೇಂದ್ರ ಹಾಗೂ ರಾಜ್ಯ ಅಧಿನಿಯಮಗಳ ಅಡಿಯಲ್ಲಿ ನಿಯಮಿಸಲಾದ ಪ್ರಸ್ತುತ ಇರುವ ನಮೂನೆಗಳ ಬದಲಾಗಿ ಸಹ ಈ ಸಂಯೋಜಿತ ಅರ್ಜಿ ನಮೂನೆಯನ್ನು ಬಳಸತಕ್ಕದ್ದು. ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಅಥವಾ ಪ್ರಾಧಿಕಾರಗಳು ಅಂಥ ಸಂಯೋಜಿತ ಅರ್ಜಿ ನಮೂನೆಯನ್ನು ಪರಿಶೀಲನೆಗಾಗಿ ಮತ್ತು ಅಗತ್ಯಪಡಿಸಿದ ಒಪ್ಪಿಗೆಗಳನ್ನು ನೀಡುವುದಕ್ಕಾಗಿ ಅಂಗೀಕರಿಸತಕ್ಕದ್ದು.][1]

[3][(2) ಅರ್ಜಿದಾರರು ಸಂಯೋಜಿತ ಅರ್ಜಿ ನಮೂನೆಯೊಂದಿಗೆ 14ನೇ ಪ್ರಕರಣದ (1)ನೇ ಉಪಪ್ರಕರಣ ಹಾಗೂ 15ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅನುಕ್ರಮವಾಗಿ ಸಂಬಂಧಿತ ಶುಲ್ಕವನ್ನು ಮತ್ತು ಸ್ವಯಂ ಪ್ರಮಾಣಪತ್ರವನ್ನು ಒದಗಿಸುವ ಆಯ್ಕೆಯನ್ನು ಮಾಡಬಹುದು. ಅರ್ಜಿದಾರರು 15ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿರುವಂತೆ ಸ್ವಯಂ ಪ್ರಮಾಣ ಪತ್ರವನ್ನು ಒದಗಿಸುವ ಆಯ್ಕೆಯನ್ನು ಮಾಡದಿದ್ದ ಸಂದರ್ಭದಲ್ಲಿ ಅರ್ಜಿದಾರರು ಕೈಗಾರಿಕೆಯ ರಚನೆ ಅಥವಾ ಸ್ಥಾಪನೆಗೆ ಮೊದಲು ಎಲ್ಲಾ ಅಗತ್ಯ ಅನುಮೋದನೆಗಳನ್ನು ಪಡೆಯತಕ್ಕದ್ದು.

(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು, ಅನ್ವಯಿಸಬಹುದಾದ ಅಧಿನಿಯಮಗಳು, ನಿಯಮಗಳು ಇತ್ಯಾದಿಗಳ ಅಡಿಯಲ್ಲಿ ಘಟಕದ ನಿರ್ವಹಣಾ ಕಾರ್ಯಾಚರಣೆಗಾಗಿ ಸಂಬಂಧಿತ ಅರ್ಜಿಗಳನ್ನು ನಿಯಮಿಸಿದ ಕಾಲಕ್ರಮಗಳಲ್ಲಿ, ಅಂದರೆ ಸ್ವೀಕೃತಿ ಪ್ರಮಾಣ ಪತ್ರವು ಮುಕ್ತಾಯಗೊಳ್ಳುವ ಆರು ತಿಂಗಳುಗಳಿಗೆ ಮೊದಲು ಸಲ್ಲಿಸತಕ್ಕದ್ದು. 13ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರವಾಗಿ ಸದರಿ ಕೈಗಾರಿಕೆಗೆ ಅಥವಾ ಉದ್ಯಮಕ್ಕೆ ಹೊರಡಿಸಲಾದ ಸ್ವೀಕೃತಿ ಪ್ರಮಾಣ ಪತ್ರವು ಈ ಉಪಪ್ರಕರಣದ ಅಡಿಯಲ್ಲಿ ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಅವಶ್ಯಪೂರ್ವ ದಸ್ತಾವೇಜು ಆಗಿರತಕ್ಕದ್ದು.

**ವಿವರಣೆ:** 2ನೇ ಪ್ರಕರಣದ (iii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಅನ್ವಯಿಸಬಹುದಾದ ಅಧಿನಿಯಮಗಳು ಮತ್ತು ನಿಯಮಗಳ ಅಡಿಯಲ್ಲಿ ಅಗತ್ಯಪಡಿಸಿದಂತೆ ಸ್ವೀಕೃತಿ ಪ್ರಮಾಣ ಪತ್ರವು ಎಲ್ಲಾ ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳಿಗಾಗಿ ಅನುಮೋದನಾ ದಸ್ತಾವೇಜು ಆಗಿರತಕ್ಕದ್ದು ಹಾಗೂ ನಿರ್ಮಾಣ ಅಥವಾ ಸ್ಥಾಪನೆಯ ಪ್ರಾರಂಭಕ್ಕೆ ಮೊದಲು ಅಗತ್ಯವಿರುವ ಅನುಮೋದನೆಗಳಾದ ಅನುಮೋದನೆ ಅಥವಾ ಒಪ್ಪಿಗೆ ನೀಡಿಕೆಯನ್ನು ಸ್ವೀಕರಿಸಿದೆ ಎಂಬುದಾಗಿ ಭಾವಿಸತಕ್ಕದ್ದು.

(4) (3)ನೇ ಉಪಪ್ರಕರಣದ ಅನುಸಾರವಾಗಿ ಅನುಮೋದನೆಗಳನ್ನು ಪಡೆಯಲಾಗಿಲ್ಲದ ನಿದರ್ಶನಗಳಲ್ಲಿ ಸ್ವೀಕೃತಿ ಪ್ರಮಾಣಪತ್ರದ ಸಿಂಧುತ್ವವು ನಿಂತುಹೋಗತಕ್ಕದ್ದು.

(5) (3) ಮತ್ತು (4)ನೇ ಉಪಪ್ರಕರಣಗಳ ಉಲ್ಲಂಘನೆಯ ನಿದರ್ಶನಗಳಲ್ಲಿ, ಸಂಬಂಧಿತ ಕ್ರಮವಹಿಸುವ ಇಲಾಖೆಗಳು ಅಥವಾ ಏಜೆನ್ಸಿಗಳು ಸಂಬಂಧಿತ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮಗಳನ್ನು ಆರಂಭಿಸತಕ್ಕದ್ದು.][3]

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 4.01.2014 ರಿಂದ ಪ್ರತಿಯೋಜಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 02.07.2020ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆಯನ್ನು ನೀಡಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 02.07.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**15. ಪ್ರಮಾಣೀಕರಣ:-** (1) ಪ್ರತಿಯೊಂದು ಉದ್ಯಮದಾರನು ನೋಡಲ್ ಏಜೆನ್ಸಿಗೆ ವಿದ್ಯುಕ್ತವಾಗಿ ಪೂರ್ಣಗೊಂಡ ಸಂಯೋಜಿತ ಅರ್ಜಿ ನಮೂನೆಯನ್ನು ಸಲ್ಲಿಸುವ ಸಮಯದಲ್ಲಿ ಒಂದು 'ಸ್ವಯಂ ಪ್ರಮಾಣಪತ್ರ' ವನ್ನು ಲಗತ್ತಿಸತಕ್ಕದ್ದು. ಸಂಬಂಧಪಟ್ಟ ಅಧಿನಿಯಮಗಳ ಮತ್ತು ಅವುಗಳಡಿಯಲ್ಲಿ ರಚಿಸಲಾದ ನಿಯಮಗಳ ಅನ್ವಯವಾಗುವ ಉಪಬಂಧಗಳನ್ನು ತಾನು ಪಾಲಿಸುವುದಾಗಿ ಮುಚ್ಚಳಿಕೆ ಬರೆದುಕೊಡತಕ್ಕದ್ದು. ಮುಚ್ಚಳಿಕೆಯನ್ನು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಬರೆದು ಒದಗಿಸತಕ್ಕದ್ದು.

(2) ಉದ್ಯಮದಾರನಿಂದ ನೀಡಿದ ಸ್ವಯಂ ಪ್ರಮಾಣ ಪತ್ರವನ್ನು, ಒಪ್ಪಿಗೆಯನ್ನು ನೀಡುವ ಮತ್ತು ಮಂಜೂರು ಮಾಡುವ ಮತ್ತು ಉದ್ಯಮದಾರರಿಗೆ ಇತರ ಸೌಲಭ್ಯಗಳನ್ನು ನೀಡುವ ಉದ್ದೇಶಕ್ಕಾಗಿ ಇಲಾಖೆಗಳು ಮತ್ತು ಪ್ರಾಧಿಕಾರಗಳು ಅಂಗೀಕರಿಸತಕ್ಕದ್ದು.

[1][(3) ಉತ್ಪಾದನಾ ಕೈಗಾರಿಕೆಗಳು ಅಥವಾ ಉತ್ಪಾದನಾ ಉದ್ಯಮಗಳು ಒದಗಿಸಬೇಕಾದ ಸ್ವಯಂ ಪ್ರಮಾಣ ಪತ್ರವು ಶಪಥಪತ್ರದ ಸ್ವರೂಪದಲ್ಲಿರತಕ್ಕದ್ದು, ಅದು ಸಂಯೋಜಿತ ಅರ್ಜಿ ನಮೂನೆಯನ್ನು (14ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ) ಸಲ್ಲಿಸಲು ಕಡ್ಡಾಯ ದಸ್ತಾವೇಜು ಆಗಿರತಕ್ಕದ್ದು. ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು, 2ನೇ ಪ್ರಕರಣದ (iii)ನೇ ಖಂಡದಲ್ಲಿ ಪರಿಭಾಷಿಸಿದ ಅನ್ವಯಿಸಬಹುದಾದ

ಎಲ್ಲಾ ಅಧಿನಿಯಮಗಳು, ನಿಯಮಗಳು, ಇತ್ಯಾದಿಯನ್ನು ಅವು ಪಾಲಿಸತಕ್ಕದ್ದಾಗಿ ಒಪ್ಪಿಗೆ ನೀಡಿಕೆಯ ಮೇಲೆ ಮುಚ್ಚಳಿಕೆಯೊಂದನ್ನು ಒದಗಿಸತಕ್ಕದ್ದು, ಹಾಗೂ ಆನಂತರದಲ್ಲಿ ಯಾವುದೇ ಉಲ್ಲಂಘನೆಯು ಕಂಡುಬಂದಲ್ಲಿ ಈ ಅಧಿನಿಯಮದ ಅಥವಾ ಅನ್ವಯಿಸಬಹುದಾದ ಯಾವುದೇ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮಕ್ಕಾಗಿ ಅದು ಹೊಣೆಯಾಗಿರತಕ್ಕದ್ದು. ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು ಸಲ್ಲಿಸಿದ ಅರ್ಜಿಯು ಘಟಕದ ಅಂತರ್ಗತ ಸೇವೆಗಳಿಗಾಗಿ ನಿಯಮಿಸಿದ ಅಪೇಕ್ಷಿತ ಶುಲ್ಕದೊಂದಿಗೆ ಇರತಕ್ಕದ್ದು.][1]

1. 2020ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 02.07.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[2][[1][**16. ತಪಾಸಣೆ.-** ಸ್ವೀಕೃತಿ ಪ್ರಮಾಣ ಪತ್ರದ ಸಿಂಧುತ್ವದ ಅವಧಿಯಲ್ಲಿ ತಪಾಸಣೆಗಳನ್ನು ವಾರೆಂಟು ಮಾಡಲಾದ ನಿದರ್ಶನಗಳಲ್ಲಿ, ನೋಡಲ್ ಏಜೆನ್ಸಿಯ ಸಮಾಲೋಚನೆ ಮತ್ತು ಸಂಬಂಧಿತ ಇಲಾಖಾ ಮುಖ್ಯಸ್ಥರ ಅನುಮೋದನೆಯೊಂದಿಗೆ ನಿಯಮಿಸಬಹುದಾದ ಅಂಥ ಮಾರ್ಗಸೂಚಿಗಳಿಗೆ ಒಳಪಟ್ಟು, ಅಂಥ ವಿಧಾನದಲ್ಲಿ ಸಂಬಂಧಿತ ಇಲಾಖೆಗಳ ಅಂಥ ಅಧಿಕಾರಿಗಳ ಮೂಲಕ ತಪಾಸಣೆಯನ್ನು ಕೈಗೊಳ್ಳತಕ್ಕದ್ದು.][1]][2]

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 4.01.2014 ರಿಂದ ಬಿಟ್ಟುಬಿಡಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 02.07.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**17. ಪರಿಭಾವಿತ ಅನುಮೋದನೆ :–** ಪ್ರತಿಯೊಂದು ಇಲಾಖೆ ಅಥವಾ ಪ್ರಾಧಿಕಾರವು, ಇತರೆ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಗೊತ್ತುಪಡಿಸಿದ ಸಮಯದೊಳಗೆ ಒಪ್ಪಿಗೆಯನ್ನು ನೀಡತಕ್ಕದ್ದು, ತಪ್ಪಿದಲ್ಲಿ ಅಂಥ ಒಪ್ಪಿಗೆಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು.

**18. ಅಪೀಲು:–** (1) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ, ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ, ಜಿಲ್ಲಾಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯು ಯೋಜನೆಯನ್ನು ಅನುಮೋದಿಸದಿರುವ ತೀರ್ಮಾನದಿಂದಾಗಿ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಸಮಿತಿಯ ತೀರ್ಮಾನವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಿಯಮಿಸಬಹುದಾದಂತೆ ಅಪೀಲು ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಪೀಲುಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಹಂತದ ಸಮಿತಿಗಳ ತೀರ್ಮಾನದ ಸಂಬಂಧದಲ್ಲಿ ಸಲ್ಲಿಸುವ ಅ ಪೀಲುಗಳ ಬಗ್ಗೆ ಬೇರೆ ಬೇರೆ ಅಪೀಲು ಪ್ರಾಧಿಕಾರಗಳನ್ನು ನಿಯಮಿಸಬಹುದು.

(2) ಅಪೀಲು ಪ್ರಾಧಿಕಾರವು, ನಿಯಮಿಸಬಹುದಾದಂತೆ ಅಂಥ ಕಾರ್ಯವಿಧಾನಗಳನ್ನು ಅನುಸರಿಸಿದ ತರುವಾಯ, ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಅದನ್ನು ವಿಲೆಮಾಡತಕ್ಕದ್ದು.

[1][**18ಎ. ಪುನರವಲೋಕನ.–** (1) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ ತೀರ್ಮಾನದಿಂದ ಬಾಧಿತನಾದ ಯಾವೊಬ್ಬ ಅರ್ಜಿದಾರನು,–

(ಎ) ಅಂಥ ಸಮಿತಿಯು, ಯಾವ ಹೊಸ ಸಂಗತಿಗಳು ಅಥವಾ ಕಾರಣಗಳ ಮೇಲೆ ಅದರ ತೀರ್ಮಾನವನ್ನು ಪುನರ್ ಪರಿಶೀಲಿಸಬೇಕಾಗಿದೆಯೋ ಅಂಥ ಹೊಸ ಸಂಗತಿಗಳನ್ನು ಅಥವಾ ಕಾರಣಗಳನ್ನು ಅರ್ಜಿದಾರನು ಹೊಂದಿದ್ದರೆ,

(ಬಿ) ತೀರ್ಮಾನದಲ್ಲಿ ಹೊರನೋಟಕ್ಕೆ ಕಾಣಬರುವ ಸ್ಪಷ್ಟವಾದ ದೋಷಗಳನ್ನು ತೋರಿಸಿಕೊಟ್ಟರೆ,–

–ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಗೆ, ಅದು ಈ ಹಿಂದೆ ನೀಡಿದ ತೀರ್ಮಾನವನ್ನು ಪುನರವಲೋಕಿಸುವಂತೆ ಅಪೀಲು ಮಾಡಿಕೊಳ್ಳಬಹುದು.

(2) ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯು ಅಂಥ ಅರ್ಜಿಯನ್ನು ಪರಿಗಣಿಸಬಹುದು ಮತ್ತು ಸೂಕ್ತ ತೀರ್ಮಾನವನ್ನು ಕೈಗೊಳ್ಳಬಹುದು ಮತ್ತು ಅದು ಅಂತಿಮವಾಗಿರತಕ್ಕದ್ದು.][1]

1. 2014ರ ಅಧಿನಿಯಮ ಸಂಖ್ಯೆ 3ರ ಮೂಲಕ ದಿನಾಂಕ: 4.01.2014 ರಿಂದ ಸೇರಿಸಲಾಗಿದೆ.

**19. ದಂಡ :–** [1][(1)][1] ಯಾವೊಬ್ಬ ಉದ್ಯಮದಾರನು ನೋಡಲ್ ಏಜೆನ್ಸಿ ಅಥವಾ ಇತರ ಇಲಾಖೆ ಅಥವಾ ಪ್ರಾಧಿಕಾರಗಳಿಗೆ ನೀಡಿದ ಸ್ವಯಂ ಪ್ರಮಾಣಪತ್ರದಲ್ಲಿನ ಷರತ್ತುಗಳನ್ನು ಅಥವಾ ಮುಚ್ಚಳಿಕೆಯನ್ನು ಪಾಲಿಸಲು

ವಿಫಲನಾದರೆ, ಅಪರಾದ ನಿರ್ಣಯವಾದ ಮೇಲೆ ಮೊದಲನೇ ಅಪರಾಧಕ್ಕಾಗಿ ಐದುಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಅಥವಾ ತರುವಾಯದ ಅಪರಾಧಕ್ಕಾಗಿ ಹತ್ತುಸಾವಿರ ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

[1][(2) ಯಾವುದೇ ಉತ್ಪಾದನಾ ಕೈಗಾರಿಕೆ ಅಥವಾ ಉದ್ಯಮವು ಸ್ವೀಕೃತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವಾಗ ನೋಡಲ್ ಏಜೆನ್ಸಿಗೆ ನೀಡಿದ ಮುಚ್ಚಳಿಕೆ ಅಥವಾ ಸ್ವಯಂ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪಾಲಿಸುವಲ್ಲಿ ವಿಫಲವಾದರೆ ಅಥವಾ ಕೈಗಾರಿಕಾ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅನ್ವಯಿಸಬಹುದಾದ ಅಧಿನಿಯಮ ಅಥವಾ ನಿಯಮದಲ್ಲಿನ ಯಾವುದೇ ಖಂಡವನ್ನು ಉಲ್ಲಂಘಿಸಿದರೆ, ಅಪರಾಧ ನಿರ್ಣೀತವಾದ ಮೇಲೆ ಮೊದಲ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ಎರಡನೇ ಹಾಗೂ ಮುಂದುವರಿದ ಅಪರಾಧಕ್ಕಾಗಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತವಾಗತಕ್ಕದ್ದು ಇದರ ಜೊತೆಗೆ, ಸಂಬಂಧಿತ ಇಲಾಖೆಗಳು ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮವನ್ನು ಪ್ರಾರಂಭಿಸತಕ್ಕದ್ದು.

(3) ಪರಿಭಾವಿತ ಒಪ್ಪಿಗೆ ನೀಡಿಕೆ ಅವಧಿಯಲ್ಲಿ, ನಿಗದಿತ ಕಾಲಕ್ರಮಗಳೊಳಗಾಗಿ ಸಂಬಂಧಿತ ಇಲಾಖೆಯ ಅಧಿಕಾರಿಯು ಸೇವೆ ಅಥವಾ ಅನುಮೋದನೆಯನ್ನು ಒದಗಿಸದಿದ್ದ ಸಂದರ್ಭದಲ್ಲಿ, ಸಕಾಲ ಸೇವೆಗಳ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ 1) ಉಪಬಂಧಗಳ ಅನುಸಾರವಾಗಿ ಅಂಥ ಅಧಿಕಾರಿಯ ವಿರುದ್ದ ದಂಡನಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.][1]

1. 2020ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 02.07.2020ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆಯನ್ನು ನೀಡಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 29ರ ಮೂಲಕ ದಿನಾಂಕ: 02.07.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**20. ಕಂಪೆನಿಗಳಿಂದ ಅಪರಾಧಗಳು ಇತ್ಯಾದಿ:-** (1) ಈ ಅಧಿನಿಯಮದ ಅಡಿಯಲ್ಲಿನ ಒಂದು ಅಪರಾಧವನ್ನು ಕಂಪೆನಿಯು ಮಾಡಿರುವಲ್ಲಿ, ಕಂಪೆನಿಯನ್ನು ಹಾಗೂ ಅಪರಾಧವು ನಡೆದ ಸಮಯದಲ್ಲಿ ಕಂಪೆನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು:

ಪರಂತು, ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತು ಪಡಿಸಿದರೆ, ಈ ಉಪಪ್ರಕರಣದಲ್ಲಿರುವುದಾವುದೂ ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತು ಪಡಿಸಲಾದಲ್ಲಿ ಅವನನ್ನು ಈ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ.-

(ಎ) "ಕಂಪೆನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳು ತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ, ಫರ್ಮಿನ ಪಾಲುದಾರ.

**21. ನಿಯಮಗಳ ರಚನಾಧಿಕಾರ.-** (1) ರಾಜ್ಯಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು, ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ

ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮ ಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

**22. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ರಾಜ್ಯ ಉನ್ನತಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಯ ಅಧ್ಯಕ್ಷರ ಅಥವಾ ಇತರ ಸದಸ್ಯರ ಅಥವಾ ಅಂಥ ಸಮಿತಿಯ ಯಾವೊಬ್ಬ ನೌಕರನ ವಿರುದ್ಧವಾಗಿ ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾವುದೇ ದಾವೆಯನ್ನು ಅಥವಾ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶ ವಿರತಕ್ಕದ್ದಲ್ಲ.

**23. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯಸರ್ಕಾರವು ಆದೇಶದ ಮೂಲಕ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ತೊಂದರೆಗಳನ್ನು ನಿವಾರಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002ನ್ನು ಈ ಕೆಳಕಂಡ ಅಧಿನಿಯಮಗಳ ಮೂಲಕ ತಿದುಪಡಿ ಮಾಡಲಾಗಿದೆ. ಅವುಗಳೆಂದರೆ:–**

**ತಿದ್ದುಪಡಿಗಳು – ಕಾಲಾನುಕ್ರಮವಾಗಿ**

**ತಿದ್ದುಪಡಿಗಳು – ಪ್ರಕರಣವಾರು**

| ಕ್ರಮ ಸಂಖ್ಯೆ | ಅಧಿನಿಯಮ ಸಂಖ್ಯೆ ಮತ್ತು ವರ್ಷ | ತಿದ್ದುಪಡಿಯಾದ ಪ್ರಕರಣಗಳು | ಷರಾ |
|---|---|---|---|
| 1. | 2003ರ ಕರ್ನಾಟಕ ಅಧಿನಿಯಮ ಸಂಖ್ಯೆ:45 | | – |

*****

## 2014ರ ಕರ್ನಾಟಕ ಅಧಿನಿಯಮ ಸಂಖ್ಯೆ. 03

(2014ರ ಜನವರಿ ತಿಂಗಳ ನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2013**

(2014ರ ಜನವರಿ ತಿಂಗಳ ಮೂರನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 45)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 2(XI), 3(2), 6(2), 9(1), 11A, 14, 16, 18A ಇವುಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಿದೆ.

## 2015ರ ಕರ್ನಾಟಕ ಅಧಿನಿಯಮ ಸಂಖ್ಯೆ 43

(2015ರ ಡಿಸೆಂಬರ್ ತಿಂಗಳ ಇಪ್ಪತ್ತೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2015**

(2015ರ ಡಿಸೆಂಬರ್ ತಿಂಗಳ ಇಪ್ಪತ್ತಮೂರನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು (2003ರ ಕರ್ನಾಟಕ ಅಧಿನಿಯಮ 45) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 3, 6 ಇವುಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಗುಂಜಿಗಾವಿ  
ಸರ್ಕಾರದ ಕಾರ್ಯದರ್ಶಿ  
ಸಂಸದೀಯ ವ್ಯವಹಾರಗಳ ಇಲಾಖೆ

## 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 29

(2020 ರ ಅಕ್ಟೋಬರ್ ತಿಂಗಳ 19 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 16 ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರ (2003ರ ಕರ್ನಾಟಕ ಅಧಿನಿಯಮ 45) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು 2020ರ ಜುಲೈ 2ನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರ (2003ರ ಕರ್ನಾಟಕ ಅಧಿನಿಯಮ 45) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(1) (iಎ) ಖಂಡದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಕಾನೂನು ಮಾಪನ ಅಧಿನಿಯಮ, 2009 (2010ರ ಕೇಂದ್ರ ಅಧಿನಿಯಮ 1) ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳು, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18), ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42), ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 76), ಕರ್ನಾಟಕ ಅರಣ್ಯ ನಿಯಮಗಳು, 1969, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12), ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 12), ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34), ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11), ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನೀತಿಗಳು".

(ii) (vii)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vii-ಎ) "ಉತ್ಪಾದನಾ ಉದ್ಯಮ" ಎಂದರೆ ಕೈಗಾರಿಕೆಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1951ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕೈಗಾರಿಕೆಗೆ ಸಂಬಂಧಪಟ್ಟ ಸರಕುಗಳ ಉತ್ಪಾದನೆ ಅಥವಾ ತಯಾರಿಕೆಗೆ ಸಂಬಂಧಪಟ್ಟ ಸರಕುಗಳ ಉತ್ಪಾದನೆ ಅಥವಾ ತಯಾರಿಕೆಯಲ್ಲಿ ತೊಡಗಿರುವ ಉದ್ಯಮ, ಅಥವಾ ವಿಶಿಷ್ಟವಾದ ಹೆಸರು ಅಥವಾ ಸ್ವಭಾವ ಅಥವಾ ಉಪಯೋಗವನ್ನು ಹೊಂದಿರುವ ಅಂತಿಮ ಉತ್ಪನ್ನಕ್ಕೆ ಮೌಲ್ಯವರ್ಧನೆಯ ಪ್ರಕ್ರಿಯೆಯಲ್ಲಿ ಬಳಸಲಾದ ಕಾರ್ಖಾನೆ ಮತ್ತು ಯಂತ್ರಘಟಕ.

(vii-ಬಿ) "ಉತ್ಪಾದನಾ ಕೈಗಾರಿಕೆ" ಎಂದರೆ ಪದಾರ್ಥಗಳ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ತೊಡಗಿರುವ ಮತ್ತು ಹೊಸ ಸಾಮಗ್ರಿಗಳ ಸೃಜನೆ ಅಥವಾ ಮೌಲ್ಯ ವರ್ಧನೆಯಲ್ಲಿ ನಿರತವಾಗಿರುವ ಕೈಗಾರಿಕೆ".

**3. 13ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ (ಜಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಚ್) ಉತ್ಪಾದನಾ ಕೈಗಾರಿಕೆಗಳು ಅಥವಾ ಉದ್ಯಮಗಳಿಂದ ಸಂಯೋಜಿತ ಅರ್ಜಿ ನಮೂನೆಯನ್ನು ಸ್ವೀಕರಿಸಿದ ಮೇಲೆ, ಸಂಬಂಧಪಟ್ಟ ನೋಡಲ್ ಏಜೆನ್ಸಿಯು ಹೂಡಿಕೆ ಸಮಿತಿಗಳಿಂದ ಅಂದರೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ, ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಗಳ ಅನುಮೋದನೆಯನ್ನು ಪಡೆದ ತರುವಾಯ, ನಿಯಮಿಸಿದ ನಮೂನೆಯಲ್ಲಿ ಅರ್ಜಿದಾರರಿಗೆ ಸ್ವೀಕೃತಿ ಪ್ರಮಾಣ ಪತ್ರವನ್ನು ಹೊರಡಿಸತಕ್ಕದ್ದು:

ಪರಂತು, ಯಾವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಅಥವಾ ಅದನ್ನು ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಭೂಮಿಯನ್ನು ಪರಿಗಣಿಸತಕ್ಕದ್ದು.

(ii) (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮದ ಸಂಬಂಧದಲ್ಲಿ, (1)ನೇ ಉಪಪ್ರಕರಣದ (ಎಚ್) ಖಂಡದ ಅಡಿಯಲ್ಲಿ ಹೊರಡಿಸಿದ ಸ್ವೀಕೃತಿ ಪ್ರಮಾಣ ಪತ್ರವು, ಸಂಬಂಧಿತ ಇಲಾಖೆಗಳು ಮಂಜೂರು ಮಾಡಿದ ಅಥವಾ ಹೊರಡಿಸಿದ ಪ್ರಾರಂಭಿಕ ಮೂರು ವರ್ಷಗಳ ಅವಧಿಗಾಗಿ ಅಥವಾ ವಾಣಿಜ್ಯ ಕಾರ್ಯಾಚರಣೆಗಳ ಆರಂಭದ ದಿನಾಂಕದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ, ಅದರ ಸ್ವೀಕೃತಿಯ ದಿನಾಂಕದಿಂದ, 2ನೇ ಪ್ರಕರಣದ (iii)ನೇ ಉಪಪ್ರಕರಣದಲ್ಲಿ ಪರಿಭಾಷಿಸಿದಂತೆ ಕೈಗಾರಿಕೆಯ ರಚನೆ ಅಥವಾ ಸ್ಥಾಪನೆಗಾಗಿ ಒಪ್ಪಿಗೆ ನೀಡಿಕೆಗಳು ಎಂಬುದಾಗಿ ಭಾವಿಸತಕ್ಕದ್ದು:

ಪರಂತು, ಕೈಗಾರಿಕೆಯ ರಚನೆಗಾಗಿ ಅಂಥ ಭಾವಿತ ಒಪ್ಪಿಗೆ ನೀಡಿಕೆಯು, ಯಾವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಅಥವಾ ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ಭೂಮಿಗೆ ಮಾತ್ರವೇ ಆಗಿರತಕ್ಕದ್ದು. ಮುಂದುವರೆದು, ಕಟ್ಟಡ ಉಪವಿಧಿಯ ಅನುಸಾರವಾಗಿ ನಿರ್ಮಾಣದಲ್ಲಿ ಮತ್ತು ಅನ್ವಯಿಸಬಹುದಾದ ಯಾವುದೇ ಅಧಿನಿಯಮ ಅಥವಾ ಅಂಥ ನಕ್ಷೆಯು ಜಾರಿಯಲ್ಲಿರುವ ಪ್ರಮುಖ ನಕ್ಷೆಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಯ ಬಳಕೆಯಲ್ಲಿ ಯಾವುದೇ ಅನ್ಯಮಾರ್ಗವಿರತಕ್ಕದ್ದಲ್ಲ;

ಮತ್ತು ಪರಂತು, ಅನುಮೋದನೆಗಳು ಸ್ಪಷ್ಟ ಹಕ್ಕು (clear title) ಇಲ್ಲದ ಭೂಮಿ ಅಥವಾ ವಿವಾದಿತ, ನಿರ್ಬಂಧಿತ ಪ್ರವರ್ಗಗಳು ಮುಂತಾದವುಗಳ ಅಡಿಯಲ್ಲಿ ಬರುವ ಭೂಮಿಗಳ ಬಳಕೆಗಾಗಿ ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮಗಳನ್ನು ಹಕ್ಕುಳ್ಳವರನ್ನಾಗಿ ಮಾಡತಕ್ಕದ್ದಲ್ಲ. ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸ್ವಾಧೀನ ಪಡಿಸಿಕೊಳ್ಳಬಹುದಾದ ಅಥವಾ ಬಳಸಬಹುದಾದ ಪ್ರದೇಶದ ಗರಿಷ್ಠ ಪರಿಮಿತಿಯಲ್ಲಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) 109ನೇ ಪ್ರಕರಣದ ಅಡಿಯಲ್ಲಿನ ಉಪಬಂಧಗಳಲ್ಲಿರುವಂತೆ ಮಿತಿಯಲ್ಲಿರತಕ್ಕದ್ದು.

**ವಿವರಣೆ:** (3)ನೇ ಉಪಪ್ರಕರಣದ ಅನುಸಾರವಾಗಿ ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು ಸ್ಥಾಪನೆಯಾದರೆ, ವಾಣಿಜ್ಯ ಕಾರ್ಯಾಚರಣೆಯ ಪ್ರಾರಂಭಕ್ಕೆ ಮೊದಲು, 14ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಅನುಸಾರವಾಗಿ ಅಗತ್ಯ ಒಪ್ಪಿಗೆಗಳನ್ನು ಅರ್ಜಿದಾರರು ಪಡೆಯುವುದು.

(4) ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಮತ್ತು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗೆ ಹಲವು ಶಾಸನಗಳು, ಅಧಿನಿಯಮಗಳು, ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ನೋಡಲ್ ಏಜೆನ್ಸಿಯ ಮೇರೆಗೆ ವಹಿಸಲಾದ ಹಲವು ಆಡಳಿತಾತ್ಮಕ ಅಥವಾ ಕ್ರಮಕೈಗೊಳ್ಳುವ ಇಲಾಖೆಗಳಿಗೆ (line departments) ನೆರವು ನೀಡುವುದು.

(5) ಅರ್ಜಿಗಳು ಅಥವಾ ಪ್ರಸ್ತಾವನೆಗಳು ಮತ್ತು ಹೊರಡಿಸಿದ ಸ್ವೀಕೃತಿ ಪ್ರಮಾಣ ಪತ್ರದ ದಾಖಲೆಯನ್ನು ನಿಗಾವಹಿಸುವುದು ಮತ್ತು ನಿರ್ವಹಿಸುವುದು.

(6) ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು, ಎಲ್ಲಾ ಯೋಜನೆ ಅರ್ಜಿಗಳು, ಅನುಮೋದನೆಗಳು ಅಥವಾ ಸ್ವೀಕೃತಿಗಳ ದತ್ತಾಂಶಮೂಲವನ್ನು (database) ಕೇಂದ್ರ ಸಂಗ್ರಹವಾಗಿ ಆನ್‌ಲೈನ್ ವ್ಯವಸ್ಥೆಗಳ ಮೂಲಕ ನಿರ್ವಹಿಸುವುದು.

**ವಿವರಣೆ:** ಸ್ವೀಕೃತಿ ಪ್ರಮಾಣ ಪತ್ರದ ವ್ಯಾಪ್ತಿಯ ಅಡಿಯಲ್ಲಿ ಅಗತ್ಯವಾಗಿ ಬರಬೇಕಾದ ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳನ್ನು ಉತ್ಪಾದನಾ ಉದ್ಯಮಗಳ ಪ್ರಾರಂಭಿಕ ಮೂರು ವರ್ಷಗಳ ಅವಧಿಗಾಗಿ ಅಥವಾ ವಾಣಿಜ್ಯ ಕಾರ್ಯಾಚರಣೆಯ ಆರಂಭದ ದಿನಾಂಕದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇಲಾಖೆಗಳು ನೀಡಿದ ಒಪ್ಪಿಗೆ ನೀಡಿಕೆಗಳೆಂದು ಪರಿಗಣಿಸತಕ್ಕದ್ದು. ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳ ಪಟ್ಟಿಯು 2ನೇ ಪ್ರಕರಣದ (iii)ನೇ ಖಂಡದಲ್ಲಿ ಪರಿಭಾಷಿಸಿದ ಒಪ್ಪಿಗೆ ನೀಡಿಕೆಗಳನ್ನು ಒಳಗೊಂಡಿರತಕ್ಕದ್ದು.

**4. 14ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 14ನೇ ಪ್ರಕರಣದಲ್ಲಿ ಅದನ್ನು (1) ಎಂಬುದಾಗಿ ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಮರುಸಂಖ್ಯೆ ನೀಡಲಾದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ಅರ್ಜಿದಾರರು ಸಂಯೋಜಿತ ಅರ್ಜಿ ನಮೂನೆಯೊಂದಿಗೆ 14ನೇ ಪ್ರಕರಣದ (1)ನೇ ಉಪಪ್ರಕರಣ ಹಾಗೂ 15ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅನುಕ್ರಮವಾಗಿ ಸಂಬಂಧಿತ ಶುಲ್ಕವನ್ನು ಮತ್ತು ಸ್ವಯಂ ಪ್ರಮಾಣಪತ್ರವನ್ನು ಒದಗಿಸುವ ಆಯ್ಕೆಯನ್ನು ಮಾಡಬಹುದು. ಅರ್ಜಿದಾರರು 15ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿರುವಂತೆ ಸ್ವಯಂ ಪ್ರಮಾಣ ಪತ್ರವನ್ನು ಒದಗಿಸುವ ಆಯ್ಕೆಯನ್ನು ಮಾಡದಿದ್ದ ಸಂದರ್ಭದಲ್ಲಿ ಅರ್ಜಿದಾರರು ಕೈಗಾರಿಕೆಯ ರಚನೆ ಅಥವಾ ಸ್ಥಾಪನೆಗೆ ಮೊದಲು ಎಲ್ಲಾ ಅಗತ್ಯ ಅನುಮೋದನೆಗಳನ್ನು ಪಡೆಯತಕ್ಕದ್ದು.

(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು, ಅನ್ವಯಿಸಬಹುದಾದ ಅಧಿನಿಯಮಗಳು, ನಿಯಮಗಳು ಇತ್ಯಾದಿಗಳ ಅಡಿಯಲ್ಲಿ ಘಟಕದ ನಿರ್ವಹಣಾ ಕಾರ್ಯಾಚರಣೆಗಾಗಿ ಸಂಬಂಧಿತ ಅರ್ಜಿಗಳನ್ನು ನಿಯಮಿಸಿದ ಕಾಲಕ್ರಮಗಳಲ್ಲಿ, ಅಂದರೆ ಸ್ವೀಕೃತಿ ಪ್ರಮಾಣ ಪತ್ರವು ಮುಕ್ತಾಯಗೊಳ್ಳುವ ಆರು ತಿಂಗಳುಗಳಿಗೆ ಮೊದಲು ಸಲ್ಲಿಸತಕ್ಕದ್ದು. 13ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರವಾಗಿ ಸದರಿ ಕೈಗಾರಿಕೆಗೆ ಅಥವಾ ಉದ್ಯಮಕ್ಕೆ ಹೊರಡಿಸಲಾದ ಸ್ವೀಕೃತಿ ಪ್ರಮಾಣ ಪತ್ರವು ಈ ಉಪಪ್ರಕರಣದ ಅಡಿಯಲ್ಲಿ ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಅವಶ್ಯಪೂರ್ವ ದಸ್ತಾವೇಜು ಆಗಿರತಕ್ಕದ್ದು.

**ವಿವರಣೆ:** 2ನೇ ಪ್ರಕರಣದ (iii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಅನ್ವಯಿಸಬಹುದಾದ ಅಧಿನಿಯಮಗಳು ಮತ್ತು ನಿಯಮಗಳ ಅಡಿಯಲ್ಲಿ ಅಗತ್ಯಪಡಿಸಿದಂತೆ ಸ್ವೀಕೃತಿ ಪ್ರಮಾಣ ಪತ್ರವು ಎಲ್ಲಾ ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳಿಗಾಗಿ ಅನುಮೋದನಾ ದಸ್ತಾವೇಜು ಆಗಿರತಕ್ಕದ್ದು ಹಾಗೂ ನಿರ್ಮಾಣ ಅಥವಾ ಸ್ಥಾಪನೆಯ ಪ್ರಾರಂಭಕ್ಕೆ ಮೊದಲು ಅಗತ್ಯವಿರುವ ಅನುಮೋದನೆಗಳಾದ ಅನುಮೋದನೆ ಅಥವಾ ಒಪ್ಪಿಗೆ ನೀಡಿಕೆಯನ್ನು ಸ್ವೀಕರಿಸಿದೆ ಎಂಬುದಾಗಿ ಭಾವಿಸತಕ್ಕದ್ದು.

(4) (3)ನೇ ಉಪಪ್ರಕರಣದ ಅನುಸಾರವಾಗಿ ಅನುಮೋದನೆಗಳನ್ನು ಪಡೆಯಲಾಗಿಲ್ಲದ ನಿದರ್ಶನಗಳಲ್ಲಿ ಸ್ವೀಕೃತಿ ಪ್ರಮಾಣಪತ್ರದ ಸಿಂಧುತ್ವವು ನಿಂತುಹೋಗತಕ್ಕದ್ದು.

(5) (3) ಮತ್ತು (4)ನೇ ಉಪಪ್ರಕರಣಗಳ ಉಲ್ಲಂಘನೆಯ ನಿದರ್ಶನಗಳಲ್ಲಿ, ಸಂಬಂಧಿತ ಕ್ರಮವಹಿಸುವ ಇಲಾಖೆಗಳು ಅಥವಾ ಏಜೆನ್ಸಿಗಳು ಸಂಬಂಧಿತ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮಗಳನ್ನು ಆರಂಭಿಸತಕ್ಕದ್ದು.

**5. 15ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 15ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಉತ್ಪಾದನಾ ಕೈಗಾರಿಕೆಗಳು ಅಥವಾ ಉತ್ಪಾದನಾ ಉದ್ಯಮಗಳು ಒದಗಿಸಬೇಕಾದ ಸ್ವಯಂ ಪ್ರಮಾಣ ಪತ್ರವು ಶಪಥಪತ್ರದ ಸ್ವರೂಪದಲ್ಲಿರತಕ್ಕದ್ದು, ಅದು ಸಂಯೋಜಿತ ಅರ್ಜಿ ನಮೂನೆಯನ್ನು (14ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ) ಸಲ್ಲಿಸಲು ಕಡ್ಡಾಯ ದಸ್ತಾವೇಜು ಆಗಿರತಕ್ಕದ್ದು. ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು, 2ನೇ ಪ್ರಕರಣದ (iii)ನೇ ಖಂಡದಲ್ಲಿ ಪರಿಭಾಷಿಸಿದ ಅನ್ವಯಿಸಬಹುದಾದ ಎಲ್ಲಾ ಅಧಿನಿಯಮಗಳು, ನಿಯಮಗಳು, ಇತ್ಯಾದಿಯನ್ನು ಅವು ಪಾಲಿಸತಕ್ಕದ್ದಾಗಿ ಒಪ್ಪಿಗೆ ನೀಡಿಕೆಯ ಮೇಲೆ ಮುಚ್ಚಳಿಕೆಯೊಂದನ್ನು ಒದಗಿಸತಕ್ಕದ್ದು, ಹಾಗೂ ಆನಂತರದಲ್ಲಿ ಯಾವುದೇ ಉಲ್ಲಂಘನೆಯು ಕಂಡುಬಂದಲ್ಲಿ ಈ ಅಧಿನಿಯಮದ ಅಥವಾ ಅನ್ವಯಿಸಬಹುದಾದ ಯಾವುದೇ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮಕ್ಕಾಗಿ ಅದು ಹೊಣೆಯಾಗಿರತಕ್ಕದ್ದು. ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು ಸಲ್ಲಿಸಿದ ಅರ್ಜಿಯು ಘಟಕದ ಅಂತರ್ಗತ ಸೇವೆಗಳಿಗಾಗಿ ನಿಯಮಿಸಿದ ಅಪೇಕ್ಷಿತ ಶುಲ್ಕದೊಂದಿಗೆ ಇರತಕ್ಕದ್ದು."

**6. 16ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 16ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**" 16.ತಪಾಸಣೆ.-** ಸ್ವೀಕೃತಿ ಪ್ರಮಾಣ ಪತ್ರದ ಸಿಂಧುತ್ವದ ಅವಧಿಯಲ್ಲಿ ತಪಾಸಣೆಗಳನ್ನು ವಾರೆಂಟು ಮಾಡಲಾದ ನಿದರ್ಶನಗಳಲ್ಲಿ, ನೋಡಲ್ ಏಜೆನ್ಸಿಯ ಸಮಾಲೋಚನೆ ಮತ್ತು ಸಂಬಂಧಿತ ಇಲಾಖಾ ಮುಖ್ಯಸ್ಥರ ಅನುಮೋದನೆಯೊಂದಿಗೆ ನಿಯಮಿಸಬಹುದಾದ ಅಂಥ ಮಾರ್ಗಸೂಚಿಗಳಿಗೆ ಒಳಪಟ್ಟು, ಅಂಥ ವಿಧಾನದಲ್ಲಿ ಸಂಬಂಧಿತ ಇಲಾಖೆಗಳ ಅಂಥ ಅಧಿಕಾರಿಗಳ ಮೂಲಕ ತಪಾಸಣೆಯನ್ನು ಕೈಗೊಳ್ಳತಕ್ಕದ್ದು."

**7. 19ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 19ನೇ ಪ್ರಕರಣದಲ್ಲಿ, 19ನೇ ಪ್ರಕರಣವನ್ನು ಅದರ (1) ನೇ ಉಪಪ್ರಕರಣವೆಂದು ಮರುಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಮರುಸಂಖ್ಯೆ ನೀಡಲಾದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನವನ್ನು ಸೇರಿಸತಕ್ಕದ್ದು, ಎಂದರೆ:-

"(2) ಯಾವುದೇ ಉತ್ಪಾದನಾ ಕೈಗಾರಿಕೆ ಅಥವಾ ಉದ್ಯಮವು ಸ್ವೀಕೃತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವಾಗ ನೋಡಲ್ ಏಜೆನ್ಸಿಗೆ ನೀಡಿದ ಮುಚ್ಚಳಿಕೆ ಅಥವಾ ಸ್ವಯಂ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪಾಲಿಸುವಲ್ಲಿ ವಿಫಲವಾದರೆ ಅಥವಾ ಕೈಗಾರಿಕಾ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅನ್ವಯಿಸಬಹುದಾದ ಅಧಿನಿಯಮ ಅಥವಾ ನಿಯಮದಲ್ಲಿನ ಯಾವುದೇ ಖಂಡವನ್ನು ಉಲ್ಲಂಘಿಸಿದರೆ, ಅಪರಾಧ ನಿರ್ಣೀತವಾದ ಮೇಲೆ ಮೊದಲ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ಎರಡನೇ ಹಾಗೂ ಮುಂದುವರಿದ ಅಪರಾಧಕ್ಕಾಗಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತವಾಗತಕ್ಕದ್ದು ಇದರ ಜೊತೆಗೆ, ಸಂಬಂಧಿತ ಇಲಾಖೆಗಳು ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮವನ್ನು ಪ್ರಾರಂಭಿಸತಕ್ಕದ್ದು.

(3) ಪರಿಭಾವಿತ ಒಪ್ಪಿಗೆ ನೀಡಿಕೆ ಅವಧಿಯಲ್ಲಿ, ನಿಗದಿತ ಕಾಲಕ್ರಮಗಳೊಳಗಾಗಿ ಸಂಬಂಧಿತ ಇಲಾಖೆಯ ಅಧಿಕಾರಿಯು ಸೇವೆ ಅಥವಾ ಅನುಮೋದನೆಯನ್ನು ಒದಗಿಸದಿದ್ದ ಸಂದರ್ಭದಲ್ಲಿ, ಸಕಾಲ ಸೇವೆಗಳ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ 1) ಉಪಬಂಧಗಳ ಅನುಸಾರವಾಗಿ ಅಂಥ ಅಧಿಕಾರಿಯ ವಿರುದ್ಧ ದಂಡನಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು."

**8. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಕೈಗಾರಿಕೆಗಳ **(ಸೌಲಭ್ಯ)** (ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ 12) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ